ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 51 | ಡಿಸೆಂಬರ್ 21, 1980 | ದರ : 50 ಪೈಸೆ

ಪಾರ್ಟಿ ಪ್ಲೀನಮ್ ಯಶಸ್ವಿಯಾಗಲಿ

ಕರ್ನಾಟಕ ರಾಜ್ಯದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಪ್ಲೀನಮ್ ಸಭೆಯು ಮೈಸೂರಿನಲ್ಲಿ ತಾ. 24ರಿಂದ 28ರ ವರೆಗೆ ನಡೆಯಲಿದೆ. ನಮ್ಮ ಪಾರ್ಟಿಯ ಬೆಳವಣಿಗೆಯಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಲಿದೆ.

1977ರ ಕೊನೆಯಲ್ಲಿ ನಡೆದ ನಮ್ಮ ರಾಜ್ಯಸಮ್ಮೇಳನದ ನಂತರ ಹಲವು ಮಹತ್ವದ ಬದಲಾವಣೆಗಳು ನಡೆದಿವೆ. ರಾಜಕೀಯ ಬದಲಾವಣೆಗಳ ಜೊತೆಗೆ ಇತರ ಸಂಘಟನಾತ್ಮಕ ಬದಲಾವಣೆಗಳೂ ಬಂದಿವೆ. ಇದನ್ನೆಲ್ಲಾ ಚರ್ಚಿಸಿ ಮುಂದಿನ ಧೋರಣೆಗಳನ್ನು ನಿರ್ಧರಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಈಗ ಸೇರುತ್ತಲಿದೆ.

ನಮ್ಮ ರಾಜ್ಯದಲ್ಲಿ ಪಾರ್ಟಿಯು ತೀವ್ರ ಬಿಕ್ಕಟ್ಟನ್ನೆದುರಿಸಬೇಕಾಯಿತು. ರಾಜ್ಯ ಕಾರ್ಯದರ್ಶಿಯನ್ನೊಳಗೊಂಡು ನಾಲ್ಕು ರಾಜ್ಯಸಮಿತಿಯ ಸದಸ್ಯರನ್ನು ಪಾರ್ಟಿಯಿಂದ ಕಿತ್ತುಹಾಕಬೇಕಾಯಿತು. ರಾಜ್ಯ ಸಮಿತಿಯನ್ನು ಪುನರ್ರಚಿಸಿ ಹೊಸ ರಾಜ್ಯ ಕಾರ್ಯದರ್ಶಿಯನ್ನು ಆರಿಸ

ಸಂಪಾದಕೀಯ

ಲಾಯಿತು. ಸಂಪೂರ್ಣ ನಿಷ್ಕ್ರಿಯಗೊಂಡಿದ್ದ ಸಾಮೂಹಿಕ ಸಂಘಟನೆಗಳನ್ನು (ಟ್ರೇಡ್‌ಯೂನಿಯನ್, ಕಿಸಾನ್‌ಸಭಾ ಇತ್ಯಾದಿ) ಚುರುಕುಗೊಳಿಸಿ ಬೆಳೆಸಬೇಕಾಯಿತು. ರಾಜ್ಯಸಮಿತಿಯ ಕೇಂದ್ರವನ್ನು ಮಂಗಳೂರಿನಿಂದ ರಾಜಧಾನಿಯಾದ ಬೆಂಗಳೂರಿಗೆ ವರ್ಗಾಯಿಸಿ ಪಾರ್ಟಿಯ ಮುಖಪತ್ರವನ್ನೂ ರಾಜಧಾನಿಯಿಂದಲೇ ಹೊರಡಿಸುವ ವ್ಯವಸ್ಥೆ ಮಾಡಲಾಯಿತು. ಪುನರ್ರಚಿತ ರಾಜ್ಯಸಮಿತಿಯು ಈ ಅವಧಿಯಲ್ಲಿ ಪಾರ್ಟಿಯನ್ನು ಪುನರ್ ಸಂಘಟಿಸಿ, ಬೆಳೆಸಿ ವಿಸ್ತರಿಸುವ ಕಾರ್ಯದಲ್ಲೂ ಕಾರ್ಮಿಕರ, ರೈತರ, ವಿದ್ಯಾರ್ಥಿಗಳ, ಯುವಕರ, ಮಹಿಳೆಯರ ಸಂಘಟನೆಗಳನ್ನು ಕಟ್ಟಿ ಬೆಳೆಸುವುದರಲ್ಲೂ, ವಿವಿಧ ವಿಭಾಗಗಳ ಹೋರಾಟಗಳನ್ನು ನಡೆಸುವುದರಲ್ಲೂ, ಇಂದಿರಾ ಕಾಂಗ್ರೆಸ್ ಆಡಳಿತೆಯಲ್ಲಿ ನರಳುತ್ತಿರುವ ನಮ್ಮ ರಾಜ್ಯದ ಜನತೆಯಲ್ಲಿ ಹೊಸ ಚೈತನ್ಯವನ್ನು ತುಂಬುವುದರಲ್ಲೂ ಗಮನಾರ್ಹ ಪ್ರಯತ್ನ ನಡೆಸಿದೆ.

(ಕಡೇ ಪುಟ ನೋಡಿ)

ಮುಖ್ಯಮಂತ್ರಿ ಬಳಿ ನಿಯೋಗ

ದಿನಾಂಕ 12-12-80 ರಂದು ಬೆಂಗಳೂರಲ್ಲಿ ನಡೆದ ಬೃಹತ್ ರ್‍ಯಾಲಿಯ ದಿನ ಮುಖ್ಯಮಂತ್ರಿ ಲಭ್ಯವಿರಲಿಲ್ಲ. ಮರುದಿನ 13-12-80ರ ಬೆಳಿಗ್ಗೆ ರೈತ ನಾಯಕರನ್ನೊಳಗೊಂಡ ನಿಯೋಗವು ಮಾತುಕತೆಗೆ ಬರಬೇಕೆಂದು ಮುಖ್ಯಮಂತ್ರಿಯಿಂದ ಕರೆ ಬಂದಿತು. ಕಾಂ. ಮುಗುವಾಳಪ್ಪ, ಪಿ. ರಾಮಚಂದ್ರರಾವ್, ವಿ. ಎನ್. ಹಳಕಟ್ಟಿ, ಆರ್. ವೆಂಕಟ್ರಾಮಯ್ಯ, ಅಶ್ವತ್ಥ್‌ನಾರಾಯಣರೆಡ್ಡಿ ಮತ್ತು ಕಾಂ. ಭೀಮಸಿಕಲಾದಗಿ ಮುಂತಾದ ರೈತ ನಾಯಕರು, ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ ಎಂ. ಕೆ. ಭಟ್ ಈ ನಿಯೋಗದಲ್ಲಿ ಪಾಲ್ಗೊಂಡಿದ್ದರು.

ಹಿಂದಿನ ದಿನ (12-12-1980) ಮುಖ್ಯಮಂತ್ರಿ ಗೈರುಹಾಜರಿದ್ದ ಮೂಲಕ 22 ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಮುಖ್ಯ ಕಾರ್ಯದರ್ಶಿಯವರಿಗೆ ಸಲ್ಲಿಸಲಾಗಿತ್ತು. ಡಿ. 13ರಂದು ಈ 22 ಬೇಡಿಕೆಗಳ ಬಗ್ಗೆ ನಡೆದ ಚರ್ಚೆಯಲ್ಲಿ ಮುಖ್ಯಮಂತ್ರಿ ಗುಂಡೂರಾವ್ ಮತ್ತು

(ಕಡೇ ಪುಟ ನೋಡಿ)



ಕರ್ನಾಟಕ ಕಾರ್ಮಿಕ ವರ್ಗದ ಪ್ರಥಮ ರಾಜಕೀಯ ಹೆಜ್ಜೆ

ರೈತರ ಬೇಡಿಕೆ ಬೆಂಬಲಾರ್ಥ ನಗರದಲ್ಲಿ ಭಾರಿ ಮೆರವಣಿಗೆ



ಹಲವಾರು ವರ್ಷಗಳಿಂದ ನಿರಂತರ ಅಲಕ್ಷ್ಯ, ಅನಾದರ ಮತ್ತು ಶೋಷಣೆಗೆ ಒಳಗಾಗಿರುವ ರಾಜ್ಯದ ರೈತರ ಮತ್ತು ಬೇಸಾಯ ಕೂಲಿಗಾರರ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಬೆಂಗಳೂರು ನಗರದಲ್ಲಿ ಡಿ. 12 ರಂದು ರೈತರು ಮತ್ತು ಕಾರ್ಮಿಕರು ಜಂಟಿಯಾಗಿ ಬೃಹತ್ ಮತಪ್ರದರ್ಶನ ನಡೆಸಿದರು. ಈ ಅಪೂರ್ವ ಮತಪ್ರದರ್ಶನದಲ್ಲಿ ಸುಮಾರು 30,000ಕ್ಕೂ ಮಿಕ್ಕಿ ರೈತ-ಕಾರ್ಮಿಕರು ಪಾಲ್ಗೊಂಡಿದ್ದರು.

ಕಳೆದ ಏಪ್ರಿಲ್ ತಿಂಗಳಿನಿಂದ ರಾಜ್ಯಾದ್ಯಂತ ನಡೆಯುತ್ತಿರುವ ರೈತ ಚಳುವಳಿಯನ್ನು ಬೆಂಬಲಿಸಲು ಕರ್ನಾಟಕ ಪ್ರಾಂತ ರೈತಸಂಘವು ರಾಜ್ಯ ಸಿ ಐ ಟಿ ಯು., ಕಾರ್ಮಿಕ ಸಂಘಟನೆಯು ಓಗೊಟ್ಟು ತನ್ನ ಪ್ರಥಮ ರಾಜಕೀಯ ಹೆಜ್ಜೆಯನ್ನಿಟ್ಟಿತು.

"ಕಾರ್ಮಿಕ ರೈತನ ಶತ್ರುವಲ್ಲ-ಬದಲಾಗಿ ಆತನ ಆಪ್ತ ಮಿತ್ರ" ಎಂಬುದನ್ನು ಕಾರ್ಯತಃ ಮಾಡಿ ತೋರಿಸಲು ತಮ್ಮ ಒಂದು ದಿವಸದ ಸಂಬಳವನ್ನು ಕಳೆದುಕೊಂಡ ಬೆಂಗಳೂರು ನಗರದ ಸಾವಿರಾರು ಕಾರ್ಮಿಕರು ರೈತರ ಮೆರವಣಿಗೆಯಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು.

ರೈತರ ಬೇಡಿಕೆಗಳನ್ನು ಬೆಂಬಲಿಸಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ಮತ್ತು ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿ.ವೈ.ಓ.)ನ ಸದಸ್ಯರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

"ರೈತನ ಬೆಳೆಗೆ ಲಾಭದಾಯಕ ಬೆಲೆ ಕೊಡಿ, ರೈತನ ಎಲ್ಲಾ ಸಾಲಗಳನ್ನು ಮಜಾಮಾಡಿ, ಬಂಧಿಸಿರುವ ರೈತ ಚಳುವಳಿಗಾರರನ್ನು ಬೇಷರತ್ತಾಗಿ ಬಿಡುಗಡೆ ಮಾಡಿ, ಬೇಸಾಯ ಕೂಲಿಗಾರರಿಗೆ 10ರೂ. ದಿನಗೂಲಿ ನೀಡಿ, ಅಭಿವೃದ್ಧಿ ತೆರಿಗೆ-ನೀರು ತೆರಿಗೆ ರದ್ದಾಗಲಿ, ಬರಗಾಲ ಪೀಡಿತ ಜಿಲ್ಲೆಗಳಲ್ಲಿ ಪರಿಹಾರ ಕಾಮಗಾರಿ ಆರಂಭಿಸಿ, ರೈತ-ಕಾರ್ಮಿಕರ ಐಕ್ಯತೆ ಚಿರಾಯುವಾಗಲಿ" ಎಂಬಿವೇ ಮುಂತಾದ ಘೋಷಣೆಗಳನ್ನು ಕೂಗುತ್ತಾ ರೈತ ಕಾರ್ಮಿಕರ ಭಾರಿ ಮೆರವಣಿಗೆಯು ಮಧ್ಯಾಹ್ನ 2 ಗಂಟೆಗೆ ಸಿಲ್ವರ್‌ಜ್ಯೂಬ್ಲಿ ಪಾರ್ಕಿನಿಂದ ಹೊರಟು ಸಿಟಿ ಮಾರ್ಕೆಟ್, ನರಸಿಂಹರಾಜ ರಸ್ತೆ, ಪುರಭವನದ ಮೂಲಕ ನಗರ ಕಾರ್ಪೊರೇಶನ್ ಕಚೇರಿ, ಜಿಲ್ಲಾ ಕಚೇರಿ ರಸ್ತೆ, ಮೈಸೂರ್ ಬ್ಯಾಂಕ್ ವೃತ್ತವನ್ನು ಬಳಸಿ ಕೆ.ಆರ್. ಸರ್ಕಲ್ ಮಾರ್ಗವಾಗಿ ವಿಧಾನಸೌಧವನ್ನು ತಲುಪಿತು.

30ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿದ್ದ ಈ ಮೆರವಣಿಗೆಯಲ್ಲಿ ಸುಮಾರು ಒಂದು ಸಾವಿರ ಮಹಿಳೆಯರೂ ಪಾಲ್ಗೊಂಡಿದ್ದರು. ಎರಡು ಮೂರು ಕಿ.ಮೀ.ಗಳಷ್ಟು ದೂರವಿದ್ದ ಮೆರವಣಿಗೆಯು ಕೆಂಪು ಬಾವುಟಗಳಿಂದ ಮತ್ತು ಬ್ಯಾನರುಗಳಿಂದ ತುಂಬಿ ಹೋಗಿದ್ದು ನೋಡುವವರ ಕಣ್ಣಿಗೆ ಹಬ್ಬವನ್ನು ಉಂಟು ಮಾಡಿತ್ತು.

ತಲೆಯ ಮೇಲೆ ಹಳದಿ ಬಣ್ಣದ ಭರ್ಜರಿ ಪೇಟ, ಹಣೆಯ ತುಂಬಾ ವಿಭೂತಿ, ಕಚ್ಚೆಪಂಚೆ ಧರಿಸಿ ಮೆರವಣಿಗೆಯ ಮುಂಭಾಗದಲ್ಲಿ ನರ್ತಿಸುತ್ತಿದ್ದ ಬಿಜಾಪುರದ ರೈತ ಬಾಂಧವರು ಬೆಂಗಳೂರಿಗರ ಗಮನ ಸೆಳೆದರು.

(ಕಡೇ ಪುಟ ನೋಡಿ)

ಡಿ.ವೈ.ಓ.ದ ಸಭೆಗಳು

ಸುಳ್ಯ :

ದ.ಕ. ಜಿಲ್ಲೆಯ ಸುಳ್ಯದಲ್ಲಿ ದಿನಾಂಕ 3-12-80ರಂದು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಸಭೆ ನಡೆಯಿತು. ತಾಲ್ಲೂಕು ಕಾರ್ಯಕರ್ತರ ಈ ಸಭೆಯಲ್ಲಿ ತಾಲ್ಲೂಕಿನ ನಾನಾ ಭಾಗಗಳಿಂದ ಸುಮಾರು ಒಂದು ನೂರು ಕಾರ್ಯಕರ್ತರು ಆಗಮಿಸಿದ್ದರು. ಮುಖ್ಯ ಅತಿಥಿಯಾಗಿ ರಾಜ್ಯ ಸಂಚಾಲಕ ಶ್ರೀರಾಮರೆಡ್ಡಿಯವರು ಆಗಮಿಸಿದ್ದರು. ಸಭೆಯ ಅಧ್ಯಕ್ಷಸ್ಥಾನವನ್ನು ಕಾಂ. ಮಾಸಾರವರು ವಹಿಸಿದ್ದರು. ಕಾಂ. ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಯುವಜನತೆಯ ಸಂಘಟನೆಯ ಪ್ರಾಮುಖ್ಯತೆಯನ್ನು ವಿವರಿಸಿದರು.

ದಿನಾಂಕ 30-12-80 ರಂದು ಸುಳ್ಯ ಮುನಿಸಿಪಾಲಿಟಿಯಲ್ಲಿ ನಡೆಯುವ ಅನ್ಯಾಯಗಳ ವಿರುದ್ಧ ಮತಪ್ರದರ್ಶನ ಮಾಡಬೇಕೆಂದು ನಿರ್ಧರಿಸಲಾಯಿತು.

ಕುಂದಾಪುರ :

ದಿನಾಂಕ 6-12-80ರಂದು ಕುಂದಾಪುರ ತಾಲ್ಲೂಕು ಡಿ.ವೈ.ಓ ನ ವಿಸ್ತೃತ ಸಭೆಯು ಕಾಂ. ನಾಯಕ್‌ರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಂ. ಶ್ರೀರಾಮರೆಡ್ಡಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ದೇಶದ ವಿದ್ಯಾವಂತ ಮತ್ತು ಅವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ 8 ಕೋಟಿಗೂ ಮಿಕ್ಕಿದೆ. ಈ ನಿರುದ್ಯೋಗಿಗಳನ್ನು ಆಡಳಿತ ಪಕ್ಷವು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಗ್ಗುಬಡಿಯಲು ದುರುಪಯೋಗಪಡಿಸಿಕೊಳ್ಳುತ್ತಿರುವ ಬಗ್ಗೆ ತಿಳಿಸಿದರು. ಮುಂದುವರೆದು, ನಮ್ಮ ದೇಶದ ಯುವಕರು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ರಂಗಗಳಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಜಾತಿ, ಮತ, ವರ್ಣಗಳನ್ನು ತೊಡೆದುಹಾಕಿ ಐಕ್ಯತೆಯಿಂದ ಹೋರಾಡಲು ಕರೆಕೊಟ್ಟರು.

ಸಭೆಯ ಪ್ರಾರಂಭದಲ್ಲಿ ತಾಲ್ಲೂಕು ಕಾರ್ಯದರ್ಶಿ ಎ. ಮಹಾಬಲರವರು ಸ್ವಾಗತಿಸಿದರು.

●

ಪುತ್ತೂರು ತಾಲ್ಲೂಕು ರೈತರ ಸಭೆ

ಪುತ್ತೂರು ತಾಲ್ಲೂಕಿನ ಬಡಗನ್ನೂರು ಗ್ರಾಮದ ಪೆಂಗೇರಿ ಎಂಬಲ್ಲಿ ರೈತ ಕಾರ್ಮಿಕರ ಸಭೆಯು 11-12-80 ರಂದು ಜರುಗಿತು. ಕಾಂ ಕೆ ತಿಮ್ಮಪ್ಪ ಗೌಡ ಅವರು ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ಕಾಂ ತಂಬನ್ ಅವರು ಮಾತನಾಡಿ, ಬಡವರು ಒಗ್ಗಟ್ಟಾಗಿ ಹೋರಾಡಬೇಕೆಂದು ಕರೆ ಕೊಟ್ಟರು. ಕಾಂ ಬಿ ರಾಮಕೃಷ್ಣ ಅವರು ಮಾತನಾಡಿ ಇಡೀ ದೇಶದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿದರು ಜನರನ್ನು ತುಳಿಯುವ ವ್ಯವಸ್ಥೆಯ ವಿರುದ್ಧ ಹೋರಾಡಿ ಹೊಸ ನಾಡನ್ನು ಸೃಷ್ಟಿಸಲು ಮುಂದಾಗಬೇಕೆಂದರು. ನಂತರ ಗ್ರಾಮ ರೈತ ಸಂಘದ ಪದಾಧಿಕಾರಿಗಳಾಗಿ ಫಕ್ಕೀರ ನಾಯ್ಕ (ಅಧ್ಯಕ್ಷ). ಕೆ ತಿಮ್ಮಪ್ಪಗೌಡ (ಕಾರ್ಯದರ್ಶಿ) ಇವರನ್ನೂ ಚನಿಯಪ್ಪ, ರಾಮಣ್ಣಗೌಡ, ಸುಬ್ಬಪ್ಪ ಮಣಿಯಾಣಿ, ಅಪ್ಪಯ್ಯ, ಮೋನಪ್ಪ ನಾಯ್ಕ, ಬೋಜ, ಶಿವಪ್ಪ ಆಚಾರಿ, ವೆಂಕಪ್ಪ, ನಾರ್ಣಪ್ಪ ನಾಯ್ಕ ಇವರನ್ನು ಸದಸ್ಯರಾಗಿ ಆರಿಸಲಾಯಿತು.


●

ಎಸ್ ಎಫ್ ಐ ದ. ಕ. ಜಿಲ್ಲಾ ಸಮ್ಮೇಳನ

ಡಿಸೆಂಬರ್ ಏಳು ಮತ್ತು ಎಂಟರಂದು ಮಂಗಳೂರಿನಲ್ಲಿ ಜರುಗಿದ ಎಸ್.ಎಫ್.ಐ.ನ ದ.ಕ. ಜಿಲ್ಲಾ ಸಮ್ಮೇಳನವು ವಿದ್ಯಾರ್ಥಿಗಳಲ್ಲಿ ಬರುತ್ತಿರುವ ಸಂಘಟನಾ ಪ್ರಜ್ಞೆ ಮತ್ತು ಎಸ್.ಎಫ್.ಐ ಮೇಲೆ ಅವರಿಗಿರುವ ವಿಶ್ವಾಸವನ್ನು ಸೂಚಿಸಿತು. ಆರು ತಾಲ್ಲೂಕುಗಳಿಂದ ವಿವಿಧ ಕಾಲೇಜು ಮತ್ತು ಹೈಸ್ಕೂಲುಗಳ ಎಸ್.ಎಫ್.ಐ. ಘಟಕಗಳಿಂದ ಆರಿಸಲ್ಪಟ್ಟ 76 ಮಂದಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಬಹಳ ಮಂದಿ ವಿದ್ಯಾರ್ಥಿನಿಯರೂ ಆಗಮಿಸಿದ್ದರು.

ವ್ಯವಸ್ಥೆ ಒದಗಿಸಬೇಕು, ಶಿಕ್ಷಣದಲ್ಲಿ ವೈಜ್ಞಾನಿಕ ಬದಲಾವಣೆ ಮಾಡಬೇಕು, ಭದ್ರತಾ ಸುಗ್ರೀವಾಜ್ಞೆ ಹಿಂತೆಗೆದುಕೊಳ್ಳಬೇಕ, ಮುಂತಾದ ಬೇಡಿಕೆಗಳ ಬಗ್ಗೆ ಠರಾವು ಅಂಗೀಕರಿಸಲಾಯಿತು. ಎಸ್.ಎಫ್.ಐ.ನ ಅಖಿಲಭಾರತ ಅಧ್ಯಕ್ಷರಾದ ಎಂ.ಎ. ಬೇಬಿ, ರಾಜ್ಯಸಮಿತಿ ಅಧ್ಯಕ್ಷ ಇಕ್ಬಾಲ್ ಹುಸೇನ್ ಪ್ರಧಾನ ಕಾರ್ಯದರ್ಶಿ ಆರಾಧ್ಯ ಅವರು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು. ಹೊಸ ಜಿಲ್ಲಾ ಸಮಿತಿ ಆಯ್ಕೆಯಾಯಿತು.

ಡಿಸೆಂಬರ್ ಎಂಟರಂದು ಬೃಹತ್ ಮೆರವಣಿಗೆ ನಡೆದು ತುಂಬಾ ಸ್ಫೂರ್ತಿದಾಯಕವಾಗಿತ್ತು. ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಹೊಸ ಅಧ್ಯಕ್ಷರಾದ ಪಿ. ರಾಮಾನುಜನ್ ವಹಿಸಿದರು. ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಆರಾಧ್ಯ ಸ್ಫೂರ್ತಿದಾಯಕ ಭಾಷಣ ಮಾಡಿದರು. ನಂತರ ಎಂ. ಎ. ಬೇಬಿ, ಇಕ್ಬಾಲ್ ಹುಸೇನ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ●



ಡಿಸೆಂಬರ್ ಏಳರ ಬೆಳಿಗ್ಗೆ ಎಸ್.ಎಫ್.ಐ ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಶಾಂತರೇಣುಕಾರಾಧ್ಯ ಅವರು ಧ್ವಜಾರೋಹಣ ಮಾಡಿದರು. ಕಾಂ. ಬಿ. ಮಾಧವ, ಕಾಂ. ನಾಗೇಶ್‌ಕುಮಾರ್ ಮತ್ತು ಕಾಂ ಆರ್. ಜಯಕುಮಾರ್ ಅವರನ್ನೊಳಗೊಂಡ ಅಧ್ಯಕ್ಷ ಮಂಡಲಿಯು ಸಮ್ಮೇಳನದ ಕಾರ್ಯಕಲಾಪಗಳನ್ನು ನಡೆಸಿತು. ಸ್ವಾಗತ ಸಮಿತಿಯ ಅಧ್ಯಕ್ಷರೂ, ಮಣಿಪಾಲದ ಕಸ್ತೂರಿಬಾ ಮೆಡಿಕಲ್ ಕಾಲೇಜಿನ ಸರ್ಜರಿ ವಿಭಾಗದ ಮುಖ್ಯಸ್ಥರೂ ಆದ ಡಾ. ಪಿ. ಕೆ. ಆರ್. ವಾರಿಯರ್ ಸ್ವಾಗತಿಸಿದರು. ಕರ್ನಾಟಕದಲ್ಲಿ ಎಸ್.ಎಫ್.ಐ. ಸ್ಥಾಪಕರಲ್ಲೊಬ್ಬರಾದ ಕೆ. ಸೂರ್ಯನಾರಾಯಣಭಟ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಕಾಂ. ಪಿ. ರಾಮಚಂದ್ರರಾವ್, ಪಿ ವಿಶ್ವನಾಥರೈ, ಬಿ.ಎಂ. ಮಾಧವ, ಕೆ.ಆರ್. ಶ್ರೀಯಾನ್, ಆನಂದ ಉಳ್ಳಾಲ ಬಿ ರಾಮಕೃಷ್ಣ, ಸಿ.ಆರ್. ಭಟ್, ವಿಠಲಪೂಜಾರಿ ಮುಂತಾದವರು ಸಮ್ಮೇಳನಕ್ಕೆ ಶುಭ ಹಾರೈಸಿದರು.

ಜಿಲ್ಲಾ ಸಮಿತಿಯ ಕಾರ್ಯದರ್ಶಿ ಶ್ರೀನಿವಾಸ್ ನಾಟೇಕರ್‌ರವರು ವರದಿಯನ್ನು ಮಂಡಿಸಿದರು. ಡೊನೇಷನ್ ಪದ್ಧತಿ ಇಲ್ಲಬೇಕು, ಉಚಿತ ಹಾಸ್ಟೆಲ್

ಬಿಣಗಾ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯಲ್ಲಿ ವೇತನ ಹೆಚ್ಚಳದ ಒಪ್ಪಂದ

ತುಟ್ಟಿಭತ್ಯ ಹೆಚ್ಚಳಕ್ಕಾಗಿ ಕಾರವಾರ ಜಿಲ್ಲೆಯ ಬಿಣಗಾದ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯ ಕಾರ್ಮಿಕರು ದಿನಾಂಕ 21-10-80ರಿಂದಹೋರಾಟ ನಡೆಸಿದ್ದರು. ದಿನಾಂಕ 28-11-80 ರಂದು ಆಡಳಿತವರ್ಗದೊಂದಿಗೆ ಒಪ್ಪಂದವಾಗಿ ಕೆಲಸ ಪ್ರಾರಂಭವಾಗಿರುವ ವರದಿ ಬಂದಿದೆ.

ಈ ಹಿಂದೆಯೇ ವೇತನದ ಬಗ್ಗೆ ಒಪ್ಪಂದವಾಗಿದ್ದು, (ಆಗಸ್ಟ್ 79) ಬೆಲೆಗಳು ವಿಪರೀತವಾಗಿ ಏರಿದ್ದರಿಂದ ಬೆಲೆ ಸೂಚ್ಯಂಕಕ್ಕನುಗುಣವಾಗಿ ತುಟ್ಟಿಭತ್ಯೆ ಹೆಚ್ಚಿಸಬೇಕೆಂದು ಕಾರ್ಮಿಕರು ಬೇಡಿಕೆ ಮಂಡಿಸಿದ್ದರು.

ಆಡಳಿತವರ್ಗವು ಪ್ರತಿ ಕಾರ್ಮಿಕನಿಗೆ 35ರೂ. ತಾತ್ಕಾಲಿಕ ಹೆಚ್ಚಳ ಕೊಡಲು ಒಪ್ಪಿಕೊಂಡಿದೆ. ಗಮನಾರ್ಹ ಅಂಶವೆಂದರೆ ವಜಾಗೊಳಿಸಲ್ಪಟ್ಟ 5 ಜನ ಕಾರ್ಮಿಕರಿಗೆ ವಿವಾದ ಕಾರ್ಮಿಕ ನ್ಯಾಯಾಲಯದಲ್ಲಿ ಇತ್ಯರ್ಥವಾಗುವವರೆಗೆ ಪೂರ್ತಿ ಸಂಬಳ ಕೊಡಲು ಒಪ್ಪಿಕೊಂಡಿರುವುದು. ಸಂಘದ ಪರವಾಗಿ ಒಪ್ಪಂದಕ್ಕೆ ಸಂಘದ ಅಧ್ಯಕ್ಷ ಕಾಂ. ಸ್ಥಳೇಕರ್, ಕಾಂ. ಕೃಷ್ಣಪ್ಪ ಮುತ್ತಿತರರು ಅಂಕಿತ ಹಾಕಿದ್ದಾರೆ. ಹೋರಾಟದಲ್ಲಿ ಸಹಕರಿಸಿದ ಎಲ್ಲರಿಗೂ ಸಂಘದ ಪದಾಧಿಕಾರಿಗಳು ಧನ್ಯವಾದ ಅರ್ಪಿಸಿದ್ದಾರೆ.

○

ತಿದ್ದುಪಡಿ

ಕಳೆದ ವಾರ (14-12-80)ದ ಪತ್ರಿಕೆಯಲ್ಲಿ, ಮುಖಪುಟದ "ಬ್ರೆಜ್ನೇವ್ ಭೇಟಿಯಿಂದ ಸ್ನೇಹ ಬಲವರ್ಧನೆ" ಎಂಬ ಲೇಖನದ 3ನೇ ಪ್ಯಾರಾದಲ್ಲಿ, ಭಾರತ-ಸೋವಿಯತ್ ಒಕ್ಕೂಟಗಳ ಸಹಕಾರವು, ಸಾಮ್ರಾಜ್ಯಶಾಹಿ ಆಟವನ್ನು ಮುರಿದು, ಖಾಸಗಿ ವಲಯದಲ್ಲಿ ಭಾರೀ ಕೈಗಾರಿಕೆಗಳನ್ನು ಸ್ಥಾಪಿಸಲು ಸಹಾಯ ಮಾಡಿತು ಎಂದಿದೆ. ದಯವಿಟ್ಟು ಈ ವಾಕ್ಯವನ್ನು "ಖಾಸಗಿ ವಲಯ"ದ ಬದಲು "ಸಾರ್ವಜನಿಕ ವಲಯ" ಎಂದು ತಿದ್ದುಪಡಿ ಮಾಡಿ ಓದಿಕೊಳ್ಳಬೇಕಾಗಿ ಕೋರಿಕೆ.

○

ರಾಜಕುಮಾರ ಚಾರ್ಲ್ಸ್‌ಗೆ ಪ್ರತಿಭಟನೆ

ಭಾರತೀಯ ವಿಜ್ಞಾನ ಸಂಸ್ಥೆಗೆ ಸೇರಿದ ವಿಜ್ಞಾನಿಗಳು ಬ್ರಿಟಿಷ್ ಸರ್ಕಾರದ ಜನಾಂಗೀಯ ನೀತಿಯನ್ನು ವಿರೋಧಿಸುವ ಸಲುವಾಗಿ 2-12-80ರಂದು ರಾಜಕುಮಾರ ಚಾರ್ಲ್ಸ್ ಅಲ್ಲಿಗೆ ಭೇಟಿನೀಡಿದಾಗ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಬ್ರಿಟಿಷ್ ಸರ್ಕಾರ ಹೆಸರಿಗೆ ಜನಾಂಗವಾದವನ್ನು ಖಂಡಿಸಿದರೂ ದ. ಆಫ್ರಿಕದ ಜನಾಂಗವಾದಿ ಸರ್ಕಾರಕ್ಕೆ ಆರ್ಥಿಕ ಬೆಂಬಲ ಕೊಡುತ್ತಿದೆ. ಬ್ರಿಟನ್‌ನಲ್ಲಿ ಬೇರೆ ಜನಾಂಗದ ವಿದ್ಯಾರ್ಥಿಗಳಿಗೆ ತುಂಬ ಕಷ್ಟಕೊಡುತ್ತಿದೆ. ನ್ಯಾಷನಲ್ ಫ್ರಂಟ್‌ನ ಸ್ವಯಂಸೇವಕರು ಏಷ್ಯಾದ ಜನರ ಮೇಲೆ ಹಲ್ಲೆ ನಡೆಸುತ್ತಿದ್ದಾರೆ. ಇದಕ್ಕೆ ಸರ್ಕಾರ ಭದ್ರತಾಕ್ರಮ ಕೈಗೊಂಡಿಲ್ಲ.

ಬ್ರಿಟಿಷ್ ಸರ್ಕಾರದ ಪಕ್ಷಪಾತ ಧೋರಣೆಗಳನ್ನು ವಿರೋಧಿಸಿ ವಿಜ್ಞಾನಿಗಳು ಪ್ರತಿಭಟನಾ ಪ್ರದರ್ಶನ ನಡೆಸಿದರು. "ಜನಾಂಗವಾದಕ್ಕೆ ಧಿಕ್ಕಾರ", "ಸಾಮ್ರಾಜ್ಯಶಾಹಿಗೆ ಧಿಕ್ಕಾರ", "ಬ್ರಿಟಿಷ್ ಕಾನೂನು= ಕಾನೂನುಬದ್ಧ ಜನಾಂಗವಾದ" ಎಂಬ ಫಲಕಗಳು, ಕಪ್ಪು ಬಾವುಟಗಳು ಚಾರ್ಲ್ಸ್‌ನನ್ನು ಎದುರುಗೊಂಡವು. ವಿಜ್ಞಾನಿಗಳ ಈ ವಿರೋಧಕ್ಕೆ ಚಾರ್ಲ್ಸ್ ದಂಗಾದರು.

ವಿಜ್ಞಾನಿಗಳಿಗೆ ರಾಜಕೀಯ ಪ್ರಜ್ಞೆ ಇರುವುದನ್ನು ಈ ಪ್ರತಿಭಟನೆ ತೋರಿಸಿತು. ವಿಜ್ಞಾನ ಸಂಸ್ಥೆಯ ಆಡಳಿತ ವರ್ಗದ ಕೆಳಮಟ್ಟಕ್ಕೂ ಅವರು ಧಿಕ್ಕಾರ ಹಾಕಿದರು. "ವಿಜ್ಞಾನಕ್ಕೆ ಹಣ ಖರ್ಚುಮಾಡಿ-ವೈಭವಕ್ಕಲ್ಲ" ಎಂಬ ಫಲಕವನ್ನು ಅವರು ಹಿಡಿದಿದ್ದರು. ●

ಬೀChi ನಿಧನಕ್ಕೆ ಸಂತಾಪ

ವಿಡಂಬನಕಾರ, ಖ್ಯಾತ ವಿಚಾರವಾದಿ ಬಳ್ಳಾರಿಯ ಭೀಮಸೇನ್ ರಾವ್ ದಿನಾಂಕ 7-12-80 ರಂದು ನಿಧನರಾದುದು ಕನ್ನಡ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ.

ಕಂದಾಚಾರದ ವಿರುದ್ಧ ಹೋರಾಡಿದ ಶ್ರೀಯುತರು ಸೃಷ್ಟಿಸಿದ 'ತಿಮ್ಮ'ನು ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ಕೊಡುಗೆ. ಜೀವನದುದ್ದಕ್ಕೂ ಜೀವನದ ಒಳ್ಳೆಯ ಮೌಲ್ಯಗಳಿಗೋಸ್ಕರ ಹೋರಾಡಿ ತಮ್ಮ ತಲೆಮಾರಿನಲ್ಲೇ ಅಪರೂಪವಾಗಿದ್ದ ಬೀಚಿಯವರ ನಿಧನಕ್ಕೆ ಐಕ್ಯರಂಗ ತನ್ನ ಅತೀವ ಶೋಕವನ್ನು ವ್ಯಕ್ತಪಡಿಸುತ್ತದೆ.

○

ಬಂದಿಗಳ ಕಣ್ಣು ಕಿತ್ತ ಕಾನೂನು ಪಾಲಕರು !


ಬಿಹಾರ ರಾಜ್ಯದ ಭಾಗಲ್ಪುರ ಸೆಂಟ್ರಲ್ ಜೈಲಿನಲ್ಲಿ ವಿಚಾರಣೆ ಎದುರಿಸುತ್ತಿರುವ ಇಪ್ಪತ್ತೊಂದು ಮಂದಿ ಕೈದಿಗಳ ಕಣ್ಣುಗಳನ್ನು ಚುಚ್ಚಿ ಆಸಿಡ್ ಸುರಿದು ಅವರನ್ನು ಜೀವಮಾನಪರ್ಯಂತ ಅಂಧರನ್ನಾಗಿ ಮಾಡಿದ ಭೀಕರ ಘಟನೆಯೊಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಸಂಸತ್ತಿನಲ್ಲಿ ಸರಕಾರವೂ ಇದನ್ನು ಒಪ್ಪಿಕೊಂಡಿದೆ. ದಿನೇದಿನೇ ಕೇಳಿಬರುತ್ತಿರುವ ಪೋಲೀಸ್ ದೌರ್ಜನ್ಯ, ಅತ್ಯಾಚಾರಗಳ ಹಿನ್ನೆಲೆಯಲ್ಲಿ ಬಿಹಾರದ ಬೇರೆಬೇರೆ ಪೋಲೀಸು ಠಾಣೆಗಳಲ್ಲಿ ನಡೆದ ಈ ರಾಕ್ಷಸೀಕೃತ್ಯವಂತೂ ಎದೆನಡುಗಿಸುವಂತಹದು.

ಪೋಲೀಸರಿಂದ ಕುರುಡರಾದ ಕೈದಿಗಳಲ್ಲಿ ಕೆಲವರನ್ನು ಸಂದರ್ಶಿಸಿದ 'ಸಂಡೇ' ಪತ್ರಿಕೆಯ ವರದಿಗಾರರು ಈ ಅವಮಾನುಷ ಕೃತ್ಯವನ್ನು ಬಯಲಿಗೆಳೆದಿದ್ದಾರೆ. ಇತರ ಪತ್ರಿಕೆಗಳೂ ಈ ಘಟನೆಯನ್ನು ವಿವರಿಸಿವೆ. ಹೀಗೆ ಅಂಧವಾದ ಒಬ್ಬ ಕೈದಿ ಉಮೇಶ್ ಯಾದವ್ ಹೇಳಿರುವಂತೆ ಅವನನ್ನು ಈ ವರ್ಷ ಫೆಬ್ರವರಿ ತಿಂಗಳ ಹದಿನಾರರಂದು ಪೋಲೀಸರು ಸೆರೆಹಿಡಿದು ಮುಜಾಹಿದ್‌ಪುರ ಠಾಣೆಗೆ ಕೊಂಡೊಯ್ದರು. ಅಲ್ಲಿ ಆರುಜನ ಪೋಲೀಸರು ಅವನ ಕೈಕಾಲುಗಳನ್ನು ಕಟ್ಟಿ ಮನಸ್ವೀ ಹೊಡೆದರು. ಡಿ.ಎಸ್.ಪಿ. ಶರ್ಮಾ ಎಂಬುವರ ಅಣತಿಯಂತೆ ಉಮೇಶಯಾದವನ ಕಣ್ಣುಗಳನ್ನು ಮೊನಚಾದ ಲೋಹದ 'ಟಕ್ವಾ'ದಿಂದ ಚುಚ್ಚಿ ತೆಗೆದು ಕಣ್ಣುಗೊಂಬೆಯಿರುವ ಕುಳಿಯಲ್ಲಿ ಆಸಿಡ್ ಸುರಿಯಬಿಡಲಾಯಿತು. ಅವನ ಕೈಗಳ ಮೇಲೂ ಆಸಿಡ್ ಬಿದ್ದಿತು. ತಡೆಯಲಾರದ ನೋವಿನಿಂದ ಪ್ರಜ್ಞಾಹೀನನಾದ ಯಾದವ್ ನಾಲ್ಕುದಿನಗಳ ಕಾಲ ಪ್ರಜ್ಞಾಹೀನ ಸ್ಥಿತಿಯಲ್ಲೇ ಇದ್ದನಂತೆ, ಭಾಗಲ್ಪುರದ ಸದರ್ ಆಸ್ಪತ್ರೆಯಲ್ಲಿ ಆತನಿಗೆ ಮತ್ತೆ ಪ್ರಜ್ಞೆ ಬಂದಾಗ ಯಾದವ್ ತನ್ನೆರಡೂ ಕಣ್ಣುಗಳನ್ನು ಕಳೆದುಕೊಂಡು ಅಂಧನಾಗಿಬಿಟ್ಟಿದ್ದ. ಅಲ್ಲಿಂದ ಅವನನ್ನು ಭಾಗಲ್ಪುರ ಸೆಂಟ್ರಲ್ ಜೈಲಿಗೆ ಸ್ಥಳಾಂತರಿಸಲಾಯಿತು. ಕಳೆದ ಆಗಸ್ಟ್‌ನಲ್ಲಿ ಯಾದವ್ ಪೂರ್ಣ ಕುರುಡನಾಗಿದ್ದಾನೆಂದು ಜೇಲಿನ ಡಾಕ್ಟರು ಪ್ರಮಾಣಪತ್ರ ನೀಡಿದ ಮೇಲಷ್ಟೇ ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಉಮೇಶ್ ಯಾದವ್‌ನನ್ನು ಈಗ 'ಅಂಧಾ ಗಬ್ಬರ್' (ಕುರುಡ ಗಬ್ಬರ್) ಎಂದು ಕರೆಯಲಾಗುತ್ತಿದೆಯಂತೆ. ಆದರೆ ಈತನೇನೂ ಸಿನಿಮಾದ ಗಬ್ಬರ್‌ಸಿಂಗ್‌ನಂತೆ ಜನರನ್ನು ಎಂದೂ ಪೀಡಿಸಿರಲಿಲ್ಲವೆಂದು ಅವನ ಊರಿನ ಜನರ ಹೇಳಿಕೆ,

ಮಂಗವ್ನಿಯಾ ಗ್ರಾಮಕ್ಕೆ ಸೇರಿದ ಇನ್ನೊಬ್ಬ ಕೈದಿಯನ್ನು ಕಳೆದ ಜೂನ್ 10ರಂದು ದಸ್ತಗಿರಿ ಮಾಡಿ ನೌಗಾಚಿಯಾ ಠಾಣೆಗೆ ಒಯ್ಯಲಾಯಿತು. ಅಲ್ಲಿ ಸಬ್ ಇನ್‌ಸ್ಪೆಕ್ಟರ್ ಶಶಿಭೂಷಣ ಶರ್ಮಾ ಕೈದಿಯ ಕಣ್ಣಿಗೆ ಮೊನೆಯಾದ ಆಯುಧವನ್ನು ಚುಚ್ಚಿದುದಲ್ಲದೆ ಊರಿನ ಜನರೆಲ್ಲ ಕುರುಡನಾದ ಬಂದಿಯನ್ನು ಕಾಣುವಂತೆ ಅವನನ್ನು ಠಾಣೆಯ ಮುಂದುಗಡೆ ಕುಳಿತುಕೊಳ್ಳುವಂತೆ ಆಜ್ಞಾಪಿಸಿದ. ಜೂನ್ 13ರಂದು ಅವನನ್ನು ಭಾಗಲ್ಪುರ ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು, ರಮಣಬೀರ್ ಎಂಬ ಇನ್ನೊಬ್ಬ ಕೈದಿಯ ಕತೆ ಇನ್ನೂ ಹೃದಯವಿದ್ರಾವಕವಾಗಿದೆ. ಇವನನ್ನು ದಸ್ತಗಿರಿ ಮಾಡಿ ನಾಥನಗರ ಪೋಲೀಸು ಠಾಣೆಗೆ ಕೊಂಡೊಯ್ದು ಅಲ್ಲಿ "ನಿನಗೆ ಟಕ್ವಾ ಬೇಕೋ ಅಥವಾ ಔಷಧಿ ಬೇಕೋ" ಎಂದು ಕೇಳಲಾಯಿತು. ಈ ಮಾತು ಕೇಳಿ ಮುಂದಾಗುವುದನ್ನು ನೆನೆದು ತಾನು ಭಯದಿಂದ ತತ್ತರಿಸಿದೆನೆಂದು ಈತ ಹೇಳಿದ್ದಾನೆ. ಪೋಲೀಸ್ ಪೇದೆಗಳು ಅವನನ್ನು ಒತ್ತಿ ಹಿಡಿದು ಬಲವಂತವಾಗಿ ಅವನ ಕಣ್ಣಿಗೆ ಆಸಿಡ್ ಸುರಿದರು. ಸಹಿಸಲಾರದ ನೋವಿನಿಂದಾಗಿ ಆತ ಪ್ರಜ್ಞಾಶೂನ್ಯನಾಗಿ ಬಿದ್ದುಬಿಟ್ಟ. ಖರ್ಗೋಲಾ ಠಾಣೆಯ ಪೋಲೀಸ್ ಅಧಿಕಾರಿ ವಾಸಿಂಖಾನ್ ಎಂಬುವನು ಅನಿಲ್‌ಯಾದವ್ ಎಂಬ ಇನ್ನೊಬ್ಬ ಬಂದಿಯ ಎರಡೂ ಕಣ್ಣುಗಳನ್ನು ಟಕ್ವಾದಿಂದ ಚುಚ್ಚಿ ಕುರುಡನನ್ನಾಗಿ ಮಾಡಿದನೆಂದು ಹೇಳಲಾಗಿದೆ ಹೀಗೆ ಅಂಧರಾದ ಎಲ್ಲ ಕೈದಿಗಳ ಕತೆಯೂ ಒಂದೇ ರೀತಿಯದ್ದಾಗಿದೆ,

ಭಾಗಲ್ಪುರ ಸೆಂಟ್ರಲ್ ಜೈಲಿನಲ್ಲಿ ಇವರನ್ನು ಕಾಣಲು ಹೋದ ವರದಿಗಾರ ಎಸ್. ಎನ್. ಎಂ. ಅಬ್ದಿ ತಾನು ಕಂಡ ದಾರುಣ ದೃಶ್ಯವನ್ನು ಹೀಗೆ ವರ್ಣಿಸಿದ್ದಾರೆ. "ಕಾರಾಗೃಹದಲ್ಲಿ ವಿಚಾರಣೆಯೆದುರಿಸುತ್ತಿರುವ ಇಪ್ಪತ್ತು ಮಂದಿಯನ್ನು ಕಾಣಲು ಜೇಲ್‌ಸುಪರಿಂಟೇಡೆಂಟ್ ಬಚ್ಚುಲಾಲ್ ದಾಸ್ ನನಗೆ ಅವಕಾಶ ಮಾಡಿಕೊಟ್ಟರು. ಇವರೆಲ್ಲ ಇನ್ನೊಬ್ಬ ಕೈದಿಯ ನೆರವು ಪಡೆದು ತಮ್ಮ ವಾರ್ಡುಗಳಿಂದ ಹೊರಬಂದರು. ಅದೊಂದು ತೀರಾ ಹೃದಯ ವಿದ್ರಾವಕ ನೋಟ. ಅವರ ಕಣ್ಣಿನ ಕುಳಿಗಳನ್ನು ಮುಚ್ಚಲಾಗಿತ್ತು. ಸುಪರಿಂಟೆಂಡೆಂಟರ ಕೋಣೆಯನ್ನು ಪ್ರವೇಶಿಸುವಾಗ ಅವರಲ್ಲಿ ಇಬ್ಬರು ಬಿದ್ದುಬಿಟ್ಟರು. ನಾನು ಅವರಿಗೆ ಇಷ್ಟೆಲ್ಲ ಪ್ರಶ್ನೆಗಳನ್ನು ಕೇಳುತ್ತಿರುವುದು ಯಾಕೆ ಮತ್ತು ಅದರಿಂದ ಅವರಿಗೇನಾದರೂ ಪ್ರಯೋಜನವಾದೀತೇ ಎನ್ನುವುದು ಅವರಿಗೇ ಅರ್ಥವಾಗಿರಲಿಲ್ಲ. ಅವರಲ್ಲಿ ಪ್ರತಿಯೊಬ್ಬರೂ ತೀರಾ ಬಡವರಂತೆಯೂ ಮುಗ್ಧರಂತೆಯೂ ಕಾಣಿಸಿಕೊಂಡರು. ಅಥವಾ ಪೋಲೀಸರು ಆರೋಪಿಸಿರುವಂತೆ ಇವರೆಲ್ಲ ಢಕಾಯಿತರೋ ಕೊಲೆಗಾರರೋ ಇರಲೂಬಹುದು. ಆದರೂ ಕಣ್ಣುಗಳಿರಬೇಕಾದ ಕಡೆ ಆಳವಾದ ಎಂದೂ ಗುಣಪಡಿಸಲಾಗದ ಗಾಯಗಳಿರುವ ಈ ಕುರುಡರು, ಅಸ್ತವ್ಯಸ್ತವಾದ ಸಾಲಿನಲ್ಲಿ ಅವರು ನನ್ನೆದುರು ಕುಳಿತಿದ್ದ ರೀತಿ - ನಾನು ಜೀವಮಾನದಲ್ಲೇ ಎಂದೂ ಮರೆಯಲಾಗದ ಕರುಣಾಜನಕ ದೃಶ್ಯ".

ಕಳೆದ ಜುಲೈ ತಿಂಗಳಲ್ಲಿ ಭಾಗಲ್ಪುರ ಸೆಂಟ್ರಲ್ ಜೇಲಿನಲ್ಲಿರುವ ಅಂಧಕೈದಿಗಳಲ್ಲಿ ಹನ್ನೊಂದು ಮಂದಿ ವರಿಷ್ಠ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು



ಸಲ್ಲಿಸಿ ತಮ್ಮನ್ನು ಕುರುಡರನ್ನಾಗಿ ಮಾಡಿದ ಪೋಲೀಸ್ ಅಧಿಕಾರಿಗಳ ವಿರುದ್ಧ ದಾವೆಹೂಡಲು ತಮಗೆ ಕಾನೂನಿನ ನೆರವು ನೀಡಬೇಕೆಂದು ಕೇಳಿಕೊಂಡಿದ್ದರು. ನಿವಾಸ್ ತೈಯುರ್ ಎಂಬ ಕೈದಿ ಬರೆದ ಪತ್ರದ ಒಕ್ಕಣೆ ಹೀಗಿದೆ:- "ನಾನು ಬಿಹಾರ ರಾಜ್ಯದ ಭಾಗಲ್ಪುರ ಜಿಲ್ಲೆಯಲ್ಲಿರುವ ಗೋಪಾಲಪುರ ಠಾಣೆಯ ವ್ಯಾಪ್ತಿಗೆ ಸೇರಿದ ಅಭಿಯಾಬಜಾರ್ ಗ್ರಾಮದ ನಿವಾಸಿ. ನನ್ನನ್ನು 17-4-1980 ರಂದು ಮಧ್ಯಾಹ್ನ 2 ಗಂಟೆಗೆ ದಸ್ತಗಿರಿ ಮಾಡಿ ನೌಗಾಚಿಯಾ ಠಾಣೆಗೆ ಸಾಗಿಸಲಾಯಿತು. ಅಲ್ಲಿ ಠಾಣಾಧಿಕಾರಿ ಶಶಿಭೂಷಣ ಶರ್ಮಾ ಮತ್ತು ಇತರ ಕೆಲವು ಪೋಲೀಸರು ನನ್ನನ್ನು ತೀವ್ರವಾಗಿ ಥಳಿಸಿದರು. ನನ್ನ ಎದೆ, ಬೆನ್ನು ಮತ್ತು ಹೊಟ್ಟೆಯ ಮೇಲೆ ಅಮಾನುಷವಾಗಿ ಹೊಡೆಯಲಾಯಿತು. ನಾನು ಹೀಗೆ ಪೆಟ್ಟುತಿನ್ನುತ್ತಿದ್ದಾಗ ಒಬ್ಬ ಪೋಲೀಸ್ ನನ್ನೆರಡೂ ಕಣ್ಣುಗಳಿಗೆ 'ಟಕ್ವಾ ಒಂದನ್ನು ಚುಚ್ಚಿದನು. ನನ್ನ ಎಡಗಣ್ಣು ಪೂರ್ತಿ ಕುರುಡಾಯಿತಾದರೂ ಬಲಗಣ್ಣಿನಲ್ಲಿ ಸ್ವಲ್ಪವೇ ದೃಷ್ಟಿಶಕ್ತಿ ಉಳಿದಿತ್ತು, ಆ ಬಳಿಕ ನನ್ನನ್ನು ನೌಗಾಚಿಯಾ ಆಸ್ಪತ್ರೆಗೆ ಕಳುಹಿಸಿ ಕಣ್ಣುಗಳಿಗೆ ಬ್ಯಾಂಡೇಜ್ ಹಾಕಲಾಯಿತು. ಅಲ್ಲಿಂದ ನೌಗಾಚಿಯಾ ಠಾಣೆಯಲ್ಲಿ ಕೂಡಿಹಾಕಲಾಯಿತು. 18-4-1980 ರಂದು ಗೋಪಾಲಪುರ ಠಾಣೆಗೆ ನನ್ನನ್ನು ಸಾಗಿಸಿದರು. ಗೋಪಾಲಪುರ ಠಾಣೆಯ ಅಧಿಕಾರಿಗಳು ನನ್ನನ್ನು ಅಂಧನನ್ನಾಗಿ ಮಾಡಿದ್ದೇಕೆಂದು ನೌಗಾಚಿಯಾ ಠಾಣೆಯ ಅಧಿಕಾರಿಯನ್ನು ಪ್ರಶ್ನಿಸಿದಕ್ಕೆ ಆತ, "ಈ ಮನುಷ್ಯನ ದುಷ್ಟತನವನ್ನು ಕೊನೆಗಾಣಿಸಲಾಗಿದೆ" ಎಂದು ಹೇಳಿದ. 1°-4-1980 ರಂದು ನನ್ನನ್ನು ಕೋರ್ಟಿಗೆ ಹಾಜರುಪಡಿಸಿ ಜಾಮೀನಿನಲ್ಲಿ ಬಿಡುಗಡೆಗೊಳಿಸಲಾಯಿತು."

"ಜನರ ಕಣ್ಣುಕೀಳಲು ಪೋಲೀಸ್ ಅಧಿಕಾರಿಗಳಿಗೆ ಭಾರತೀಯ ದಂಡಸಂಹಿತೆಯ ಪ್ರಕಾರ ಅಧಿಕಾರವಿರುವುದಿಲ್ಲ. ಹಣಕಾಸಿನ ತೊಂದರೆಯಿಂದಾಗಿ ನಾನು ಪೋಲೀಸರ ವಿರುದ್ಧ ದಾವೆ ಹೂಡಲು ಅಸಮರ್ಥನಾಗಿದ್ದೇನೆ ಹಾಗಾಗಿ ನನಗೆ ವಕೀಲರ ಸಹಾಯ ನೀಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ".

ಆದರೆ ಕಾನೂನಿನ ಪ್ರಕಾರ ಈ ಬಗೆಯ ಕೈದಿಗಳಿಗೆ ವಕೀಲರ ಸಹಾಯ ನೀಡಲು ಅವಕಾಶವಿಲ್ಲದ ಕಾರಣ ಅವನ ಮನವಿಯನ್ನು ತಿರಸ್ಕರಿಸಲಾಯಿತ. ಇದನ್ನು ತಿಳಿದ ಭಾಗಲ್ಪುರದ ಒಬ್ಬ ಯುವಕ ವಕೀಲರು ಈ ದೌರ್ಜನ್ಯಗಳ ಕುರಿತು ಸಂಪೂರ್ಣ ಮಾಹಿತಿ ಸಂಗ್ರಹಿಸಿ ಸುಪ್ರೀಂಕೋರ್ಟಿನ ಕಪಿಲ ಹಿಂಗೂರಾನಿ ಎಂಬವರಿಗೆ ಕಳುಹಿಸಿಕೊಟ್ಟರು. ಈ ವರದಿಯ ಆಧಾರದ ಮೇಲೆ ಕಪಿಲ ಹಿಂಗೂರಾನಿ ಅಕ್ಟೋಬರ್ 10ರಂದು ಸುಪ್ರೀಂ ಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿಸಲ್ಲಿಸಿದರು. ಈ ಬಗ್ಗೆ ವಿಚಾರಣೆ ನಡೆಸಿ ನಾಲ್ಕುವಾರಗಳೊಳಗಾಗಿ ಉತ್ತರ ನೀಡಬೇಕೆಂದು ಶ್ರೇಷ್ಠ ನ್ಯಾಯಾಧೀಶರು ಬಿಹಾರ ಸರಕಾರಕ್ಕೆ ಆದೇಶ ನೀಡಿದ್ದರೂ ಅಕ್ಟೋಬರ್ ಕೊನೆಯವರೆಗೂ ರಾಜ್ಯಸರಕಾರ ಏನೂ ನಡೆದಿಲ್ಲವೆನ್ನುವಂತೆ ವರ್ತಿಸಿತು. ಪೋಲೀಸ್ ಖಾತೆಯಂತೂ ತಮ್ಮ ವರ್ತುಲದಲ್ಲಿ ಇಂತಹ ಅಮಾನುಷ ಘಟನೆ ತೀರಾ ಸಾಮಾನ್ಯವೆಂಬಂತೆ ವರ್ತಿಸಿತು, ಕಾನೂನುಪಾಲನೆಯ ಹೆಸರಿನಲ್ಲಿ ಕಾನೂನನ್ನು ತಾವೇ ಕೈಗೆತ್ತಿಕೊಂಡು ಪೋಲೀಸರು ನಡೆಸುತ್ತಿರುವ ಇಂತಹ ದೌರ್ಜನ್ಯಗಳಿಗೆ ಕೊನೆಯಿದೆಯೆ ?

○

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರ ವಿರುದ್ಧ

ಎನ್. ಎಸ್. ಓ.

ಉತ್ತರ ಪ್ರದೇಶದ ಮೊರಾದಾಬಾದ್ ಜಿಲ್ಲೆಯಲ್ಲಿ ಮತೀಯ ಗಲಭೆಯ ಆರೋಪದ ಮೇಲೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರನ್ನು ರಾಷ್ಟ್ರೀಯ ಸುರಕ್ಷಣಾ ಕಾಯ್ದೆಯ ಮೇರೆಗೆ ಬಂಧಿಸಿರುವ ವಿಚಿತ್ರ ವರದಿ ಬಂದಿದೆ. ಉತ್ತರ ಪ್ರದೇಶದ ರಾಜ್ಯ ಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ಪಿ ಕೆ. ತಂಡನ್ ಉಗ್ರವಾಗಿ ಖಂಡಿಸಿದ್ದಾರೆ. ಸುಳ್ಳು ಆರೋಪದ ಮೇಲೆ ಪಕ್ಷದ ಕಾರ್ಯಕರ್ತರನ್ನು ಬಂಧಿಸಿರುವುದರ ವಿರುದ್ಧ ಯು. ಪಿ. ಯ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಕಮ್ಯುನಿಸ್ಟ್ ಪಾರ್ಟಿ ಅಸ್ತಿತ್ವಕ್ಕೆ ಬಂದಂದಿನಿಂದ ಇಂದಿನವರೆಗೂ ಯಾರೂ ಪಕ್ಷದ ಮೇಲೆ ಮತೀಯ ಗಲಭೆಯ ಆರೋಪ ಮಾಡುವ ಧೈರ್ಯಮಾಡಿರಲಿಲ್ಲ. ಕೋಮುವಾದಿ ಶಕ್ತಿಗಳು ತಾಂಡವವಾಡಿ ಜನತೆಯ ಜೀವನವನ್ನು ಹದಗೆಡಿಸುವುದರ ವಿರುದ್ಧ ಶ್ರಮಿಸುತ್ತಿದ್ದ ಪಕ್ಷದ ಮೇಲೆ ಆರೋಪ ಮಾಡಿರುವುದು ದುರದೃಷ್ಟಕರ,

ಮೊರಾದಾಬಾದ್ ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಕಾಂ. ಖಾನ್ ಅಶ್ರಫ್ ಪರವೇಜ್‌ರನ್ನೊಳಗೊಂಡು ಕಾರ್ಯಕರ್ತರಾದ ಸಿದ್ದಿಕೀ ಹುಸೇನ್, ಮೊಹಮ್ಮದ ಇಸ್ಲಾಮ್, ಅಕಬರ ಹುಸೇನ್, ಮುನ್ಸಿ ಅಲೀಖಾನ್ ಮೊದಲಾದವರನ್ನು ಬಂಧಿಸುವ ವಾರಂಟ್ ಹೊರಡಿಸಿರುವುದು ಖಂಡನಾರ್ಹ, ಇವರೆಲ್ಲ ಆಗಸ್ಟ್-13 ರಂದು ಮೊರಾದಾಬಾದಿನಲ್ಲಿ ಪಿ. ಎ. ಸಿ. ಯವರು ನಡೆಸಿದ ಹತ್ಯಾಕಾಂಡವನ್ನು ಉಗ್ರವಾಗಿ ಪ್ರತಿಭಟಿಸಿದ್ದರು.

"ತಕ್ಷಣ ಮುಖ್ಯಮಂತ್ರಿಯವರು ಪೋಲೀಸರ ಹೇಯ ವರ್ತನೆಗೆ ತಡೆ ಹಾಕಬೇಕಲ್ಲದೆ ಪಕ್ಷದ ಸಂಗಾತಿಗಳ ಮೇಲಿನ ಬಂಧನದ ವಾರಂಟನ್ನು ರದ್ದುಗೊಳಿಸಬೇಕು." ಎಂದು ಕಾಂ. ತಂಡನ್ ಒತ್ತಾಯಿಸಿದ್ದಾರೆ. ●

ಐಕ್ಯರಂಗ

ಓದಿ

ಪಕ್ಷದ ಪ್ಲೀನಮ್ ಮುಂದಿರುವ ಪ್ರಶ್ನೆ

ಎಂ. ಕೆ. ಭಟ್

೧೯೮೦ ಡಿಸೆಂಬರ್ ೨೪ರಿಂದ ೨೮ರ ತನಕ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯದ ಪ್ಲೀನಮ್ ಮೈಸೂರಿನಲ್ಲಿ ನಡೆಯಲಿದೆ. ಪ್ಲೀನಮ್ ಸೇರುವ ಹಿನ್ನೆಲೆ, ಪ್ಲೀನಮ್ ಮುಂದಿರುವ ಪ್ರಶ್ನೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದು ಈ ಲೇಖನದ ಉದ್ದೇಶವಾಗಿದೆ.

ಒಂದಾಗಿದ್ದ ಭಾರತ ದೇಶದಲ್ಲಿನ ಕಮ್ಯುನಿಸ್ಟ್ ಚಳುವಳಿಯು 1964ರಲ್ಲಿ ಎರಡಾಯಿತು. 1969ರಲ್ಲಿ ಮತ್ತೆ ಇನ್ನೊಂದು ತುಂಡಾಯಿತು. ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲುಂಟಾಗಿದ್ದ ಬಿರುಕು, ಜಗತ್ತಿನ ಪ್ರಮುಖ ಕಮ್ಯುನಿಸ್ಟ್ ಪಕ್ಷಗಳು ತಳೆದಿದ್ದ ಭಿನ್ನ ಧೋರಣೆಗಳು-ಇವೆಲ್ಲಾ ರಾಷ್ಟ್ರೀಯ ಮಟ್ಟದ ಕಮ್ಯುನಿಸ್ಟ್ ಚಳುವಳಿಯನ್ನು ವಿಭಜಿಸುವಂತೆ ಪ್ರೋತ್ಸಾಹ ನೀಡಿದುವು. ಇದರೊಂದಿಗೆ ಅವರವರ ದೇಶಗಳಲ್ಲಿ ಕ್ರಾಂತಿಯನ್ನು ನಡೆಸುವ ಬಗೆ ಹೇಗೆ, ಸಮಾಜವಾದವನ್ನು ವಾಸ್ತವಿಕತೆಯನ್ನಾಗಿಸುವ ದಾರಿ ಯಾವುದು ಎನ್ನುವುದರ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು ಬಂದು ಒಂದಾಗಿದ್ದ ಹಲವಾರು ಕಮ್ಯುನಿಸ್ಟ್ ಪಕ್ಷಗಳಲ್ಲಿ ಒಡಕುಂಟಾಯಿತು. ಭಾರತ ಕಮ್ಯುನಿಸ್ಟ್ ಚಳುವಳಿಯೂ ಇದಕ್ಕೆ ಹೊರತಿಲ್ಲ.

ಅಂತರ್‌ರಾಷ್ಟ್ರೀಯವಾಗಿ ಮತ್ತು ರಾಷ್ಟ್ರೀಯವಾಗಿ ಸ್ಪಷ್ಟ ಮತ್ತು ನಿರ್ದಿಷ್ಟ ನಿಲುವನ್ನು ವಹಿಸಿಕೊಂಡ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನು ಜಗತ್ತಿನ ಕಮ್ಯುನಿಸ್ಟ್ ಚಳುವಳಿಯಿಂದ ದೂರವಿಡಲು ಮತ್ತು ದೇಶದ ಜನತೆಯಿಂದ ಪ್ರತ್ಯೇಕಿಸಲು ಸತತ ಪ್ರಯತ್ನಗಳು ನಡೆದುವು. ಜಗತ್ತಿನ ಅತ್ಯಂತ ಪ್ರಬಲ ಮತ್ತು ದೊಡ್ಡ ಎರಡು ಕಮ್ಯುನಿಸ್ಟ್ ಪಕ್ಷಗಳು ಸಿ.ಪಿ.ಐ. (ಎಂ.) ಬಗ್ಗೆ ತಳೆದ ಧೋರಣೆ ಮತ್ತು ನಮ್ಮ ದೇಶದಲ್ಲಿ ನಮ್ಮನ್ನು ಜನತೆಯಿಂದ ಪ್ರತ್ಯೇಕಿಸುವಂತೆ ನಡೆಸಿದ ಪ್ರಚಾರ ಮತ್ತು ಪ್ರಯತ್ನ, ಇದರೊಂದಿಗೆ ಆಳುವ ವರ್ಗದ ಕ್ರೂರ ದಬ್ಬಾಳಿಕೆ-ಇವೆಲ್ಲವನ್ನೂ ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ಎದುರಿಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಮಾತ್ರವೇ ಅಲ್ಲ, ಭಾರತ ದೇಶದ ಪ್ರಮುಖ ಕಮ್ಯುನಿಸ್ಟ್ ಪಕ್ಷವಾಗುವುದು ಸಾಧ್ಯವಾಗಿದೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ. ಇಂದು ಪ. ಬಂಗಾಳ, ತ್ರಿಪುರಾ ರಾಜ್ಯಗಳ ಎಡರಂಗ ಸರಕಾರಗಳಿಗೂ, ಕೇರಳ ರಾಜ್ಯದ ಎಡಪ್ರಜಾಪ್ರಭುತ್ವರಂಗ ಸರಕಾರಕ್ಕೂ ನೇತೃತ್ವವೀಯುತ್ತಿರುವ ಸಿ.ಪಿ.ಐ. (ಎಂ.), ರಾಷ್ಟ್ರದಲ್ಲಿ ಒಂದು ಎಡ ಪ್ರಜಾಪ್ರಭುತ್ವ ಬದಲಿಯನ್ನು ರೂಪಿಸಲು ನಡೆಸುವ ಪ್ರಯತ್ನಗಳ ಮುಂಚೂಣಿಯಲ್ಲಿದೆ.

ಈ ವಾಸ್ತವಿಕತೆಯನ್ನು ಮನಗಂಡು ಇಂದು ಜಗತ್ತಿನ ಪ್ರಮುಖ ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ ಹಲವಾರು ಕಮ್ಯುನಿಸ್ಟ್ ಪಕ್ಷಗಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದೊಂದಿಗೆ ಸ್ನೇಹವನ್ನು, ಉತ್ತಮ ಸಂಬಂಧವನ್ನು ಬಯಸುತ್ತಿವೆ. ಭಾರತ ದೇಶದಲ್ಲಿ, ರಾಜಕೀಯ ರಂಗದಲ್ಲಿ ಸಿ.ಪಿ.ಐ (ಎಂ.) ಪ್ರಮುಖ ಪಾತ್ರವನ್ನು ವಹಿಸುತ್ತಲಿದೆ. ದೇಶದ ಕಾರ್ಮಿಕವರ್ಗ, ಹಳ್ಳಿಯ ಬಡವರು, ವಿದ್ಯಾರ್ಥಿ ಯುವಜನತೆ, ಪ್ರಗತಿಶೀಲ ಬುದ್ಧಿಜೀವಿಗಳು ಮತ್ತು ಜನಸಾಮಾನ್ಯರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದತ್ತ ನೋಡುತ್ತಿದ್ದಾರೆ. ಭಾರತ ದೇಶದಲ್ಲಿ ಶೋಷಣೆಗೊಳಗಾದ ಜನತೆಯನ್ನು ಎಲ್ಲಾ ಶ್ರಮಜೀವಿಗಳನ್ನು ಸಂಘಟಿಸುವತ್ತ, ಕಾರ್ಮಿಕವರ್ಗದ ನೇತೃತ್ವದಲ್ಲಿ ವರ್ಗಹೋರಾಟ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಟ ನಡೆಸುವತ್ತ, ಒಂದು ಎಡ ಪ್ರಜಾಪ್ರಭುತ್ವ ಬದಲಿಯನ್ನು ಸಂಘಟಿಸುವತ್ತ ಪ. ಬಂಗಾಳ, ತ್ರಿಪುರಾ, ಕೇರಳಗಳಲ್ಲಿನ ಎಡರಂಗ ಸರಕಾರ ಮತ್ತು ಎಡ ಪ್ರಜಾಪ್ರಭುತ್ವ ರಂಗ ಸರಕಾರಗಳು ಸ್ಫೂರ್ತಿಯನ್ನೀಯುತ್ತಿವೆ. ಈ ಮೂರು ರಾಜ್ಯಗಳಲ್ಲಿನ ಸರಕಾರಗಳು, ಇಡೀ ರಾಷ್ಟ್ರದ ಜನತೆಯ ಕೈಯ್ಯಲ್ಲಿರುವ ಪ್ರಬಲ ಅಸ್ತ್ರಗಳಾಗಿವೆ. ಈ ರಾಜ್ಯಗಳಲ್ಲಿನ ಸಾಧನೆಗಳನ್ನು ಉಳಿಸಿಕೊಂಡು, ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಗೊಳಿಸುವುದು, ರಾಷ್ಟ್ರದಾದ್ಯಂತ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಿ ಬಲಗೊಳಿಸುವುದು-ಇವೆಲ್ಲದರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ.

ಎಡರಂಗ ಮತ್ತು ಎಡಪ್ರಜಾಪ್ರಭುತ್ವರಂಗ ಸರಕಾರಗಳನ್ನು ಉರುಳಿಸಲು ಮತ್ತು ಎಡಶಕ್ತಿಗಳ ಮುನ್ನಡೆಯನ್ನು ತಡೆಯಲು ಸರ್ವಾಧಿಕಾರಿ ಶಕ್ತಿಗಳು ನಡೆಸುವ ಪ್ರಯತ್ನ, ದುಡಿಯುವ ಜನ ಒಂದಾಗದಂತೆ ಮಾಡಲು ಕೋಮುವಾದಿ ಹಾಗೂ ಛಿದ್ರಕಾರಿ ಶಕ್ತಿಗಳು ನಡೆಸುವ ತಂತ್ರ-ಇವೆಲ್ಲಾ ಪರಿಸ್ಥಿತಿಯ ಗಂಭೀರತೆಯನ್ನೂ ಮತ್ತು ನಾವು ತುರ್ತಾಗಿ ಮಾಡಬೇಕಾದ ಕೆಲಸಗಳನ್ನು ಎತ್ತಿ ತೋರಿಸುತ್ತಿವೆ. ಸಲ್ಕಿಯಾದಲ್ಲಿ ಸೇರಿದ್ದ ಪಕ್ಷದ ರಾಷ್ಟ್ರಮಟ್ಟದ ಪ್ಲೀನಮ್ ಈ ಅಂಶಗಳನ್ನೆಲ್ಲಾ ಗಮನದಲ್ಲಿರಿಸಿ, ಪಕ್ಷದ ಸಂಘಟನೆಯನ್ನು ಬಲಗೊಳಿಸಿ, ಪಕ್ಷವನ್ನು ಪಸರಿಸಲು, ಪಕ್ಷವು ಜನತೆಯ ಮಧ್ಯೆ ಬೇರೂರುವಂತೆ ಮಾಡಲು ಕರೆ ಇತ್ತಿದೆ, ಕಾರ್ಮಿಕವರ್ಗದ ನೇತೃತ್ವದ ಸಾಮೂಹಿಕ ಕ್ರಾಂತಿಕಾರಿ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ದೇಶದ ಜನತೆಗೆ ನೇತೃತ್ವ ಕೊಡುವಂತಾಗಬೇಕಾದರೆ, ತನ್ನ ಸಂಘಟನಾ ನಿಶ್ಯಕ್ತಿಗಳನ್ನು ಹೋಗಲಾಡಿಸಿ, ಹಳೆಯ ಅನುಭವದ ಆಧಾರದಿಂದ ಹೊಸ ರೀತಿಯಲ್ಲಿ ಕೆಲಸಮಾಡಬೇಕಾಗಿದೆ. ಈ ದಿಸೆಯಲ್ಲಿ ಹಲವಾರು ಸಂಘಟನಾ ನಿರ್ಣಯಗಳನ್ನು ಸಲ್ಕಿಯಾ ಪ್ಲೀನಮ್ ಕೈಗೊಂಡಿದೆ.

ಸಲ್ಕಿಯಾ ಪ್ಲೀನಮ್ ನಿರ್ಣಯಗಳನ್ನು ಜಾರಿಗೊಳಿಸುವುದರಲ್ಲಿ ಸಾಧಿಸಿದ ಪ್ರಗತಿ, ಕರ್ನಾಟಕ ರಾಜ್ಯದಲ್ಲಿನ ಪಕ್ಷದ ಸಂಘಟನೆಗಿರಬಹುದಾದ ವಿಶಿಷ್ಟ ಸಮಸ್ಯೆಗಳು, ಕರ್ನಾಟಕ ರಾಜ್ಯದಲ್ಲಿ ಪಕ್ಷದ ಸಂಘಟನೆಯ ಪರಿಸ್ಥಿತಿ, ರಾಜ್ಯದಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿಯಾಗಬೇಕಾದರೆ ಸಂಘಟನೆಗೆ ಹೊಸರೂಪ ಕೊಡುವುದೆಂತು-ಇವೇ ಮೊದಲಾದುವುಗಳನ್ನು ವಿಮರ್ಶಿಸಿ ಸೂಕ್ತ ಸಂಘಟನಾ ನಿರ್ಣಯಗಳನ್ನು ಕೈಗೊಳ್ಳುವುದೇ ಮೈಸೂರಿನಲ್ಲಿ ಸೇರಲಿರುವ ಪಕ್ಷದ ರಾಜ್ಯ ಪ್ಲೀನಮ್‌ನ ಉದ್ದೇಶವಾಗಿದೆ. ಕೇರಳ, ಬಂಗಾಲ ಮತ್ತು ತ್ರಿಪುರಾಗಳ ಸಾಧನೆಗಳನ್ನು ಗಟ್ಟಿಗೊಳಿಸಬೇಕಾದರೆ ಮತ್ತು ರಾಷ್ಟ್ರದಲ್ಲಿ ಒಂದು ಎಡ ಪ್ರಜಾಪ್ರಭುತ್ವ ಬದಲಿ ಬೆಳೆಯುವಂತಾಗಬೇಕಾದರೆ, ಕರ್ನಾಟಕದಲ್ಲೂ ಎಡ ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯಬೇಕು. ನಮ್ಮ ಚಾರಿತ್ರಿಕ ಕರ್ತವ್ಯವನ್ನು ಈಡೇರಿಸಬೇಕಾದರೆ ನಮ್ಮ ರಾಜ್ಯದಲ್ಲಿ ನಮ್ಮ ಪಕ್ಷವು ಅತ್ಯಂತ ಪ್ರಬಲ ರಾಜಕೀಯ ಶಕ್ತಿಯಾಗಬೇಕು.

ಕರ್ನಾಟಕ ರಾಜ್ಯದಲ್ಲಿ ತಪ್ಪು ಧೋರಣೆಗಳನ್ನು ಅನುಸರಿಸಿ, ಪಕ್ಷದ ಬೆಳವಣಿಗೆಗೆ ಅಡ್ಡಿಯುಂಟುಮಾಡುತ್ತಿದ್ದ ಪಕ್ಷದ ರಾಜ್ಯ ಮುಖಂಡತ್ವದ ಮುಖ್ಯ ವಿಭಾಗವನ್ನು ಕಿತ್ತುಹಾಕಿ, ರಾಜ್ಯಸಮಿತಿಯ ಪುನರ್‌ಸಂಘಟನೆಯಾದ ಮೇಲಿನ ಕಳೆದ 29 ತಿಂಗಳುಗಳಲ್ಲಿ ಗಣನೀಯ ಪ್ರಗತಿ ಸಾಧಿಸುವುದು ಸಾಧ್ಯವಾಗಿದೆ. ಇದ್ದ ಸಂಘಟನೆಗಳಿಗೆ ಜೀವ ತುಂಬುವುದು, ಹೊಸ ಸಂಘಟನೆಗಳನ್ನು ಸ್ಥಾಪಿಸುವುದು, ಇರುವೆಡೆಗಳಲ್ಲಿ ಕೆಲಸವನ್ನು ಉತ್ತಮಗೊಳಿಸುವುದು, ಹೊಸ ಪ್ರದೇಶಗಳಿಗೆ ಕೆಲಸ ಕಾರ್ಯಗಳನ್ನು ಪಸರಿಸುವುದು, ರಾಜ್ಯದ ದಿನನಿತ್ಯದ ಆಗುಹೋಗುಗಳಲ್ಲಿ ಮತ್ತು ರಾಜಕೀಯದಲ್ಲಿ ಮಧ್ಯಪ್ರವೇಶ ಮಾಡುವುದು, ಸೈದ್ಧಾಂತಿಕ ತಿಳುವಳಿಕೆ ನೀಡುವುದು ಮತ್ತು ರಾಜಕೀಯ ಪ್ರಜ್ಞೆ ಬೆಳೆಸುವುದು - ಇವೆಲ್ಲವುಗಳಲ್ಲಿ ಮುನ್ನಡೆ ಸಾಧಿಸಿರುವುದು ಪಕ್ಷದ ರಾಜ್ಯದ ಮುಖಂಡತ್ವ ಮತ್ತು ಎಲ್ಲಾ ಹಂತಗಳಲ್ಲಿ ಪಕ್ಷದ ಕಾರ್ಯಕರ್ತರು ಪಟ್ಟ ಶ್ರಮದ ಫಲವಾಗಿದೆ. ಡಿಸೆಂಬರ್ 12ರಂದು ಬೆಂಗಳೂರಲ್ಲಿ ನಡೆಸಿದ ಭಾರಿ ಪ್ರಮಾಣದ ರೈತ-ಕಾರ್ಮಿಕರ ಮತಪ್ರದರ್ಶನಗಳ ನಮ್ಮ ಒಟ್ಟು ಬೆಳವಣಿಗೆ ಮತ್ತು ಸಾಧನೆಗಳ ಪ್ರತಿಫಲನವಾಗಿದೆ.

ನಮ್ಮ ಸಾಧನೆಗಳ ಬಗ್ಗೆ ನಾವು ಹೆಮ್ಮೆಪಡಬೇಕಾದರೂ, ಇಷ್ಟರಿಂದಲೇ ತೃಪ್ತಿಪಡುವುದು ಸಾಧ್ಯವಿಲ್ಲ. ನಾವು ಸಾಧಿಸಬೇಕಾದ ಕಾರ್ಯಗಳು ಬಹಳಷ್ಟಿವೆ. ನಮ್ಮ ಪಕ್ಷದ ಸಂಘಟನೆಯನ್ನು ಬಲಪಡಿಸುವುದರೊಂದಿಗೆ, ರಾಜ್ಯದಲ್ಲಿ ಎಡಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಮತ್ತು ಮುನ್ನಡೆಯನ್ನು ಸಾಧಿಸುವುದಕ್ಕಾಗಿ ಶ್ರಮಿಸಬೇಕಾಗಿದೆ. ಇವೆಲ್ಲಾ ಮಾಡಬೇಕಾದರೆ ನಮ್ಮಲ್ಲಿರುವ ನಿಶ್ಯಕ್ತಿಯನ್ನು, ಸಂಘಟನಾ ಕೊರತೆಗಳನ್ನು ಹೋಗಲಾಡಿಸಬೇಕು. ನಮ್ಮ ಸಂಘಟನೆಗೆ ಹೊಸರೂಪ, ನವಚೈತನ್ಯ ತುಂಬಬೇಕು. ಮೈಸೂರಿನಲ್ಲಿ ನಡೆಯುವ ಪ್ಲೀನಮ್ ಇದರಲ್ಲಿ ಸಹಾಯಕವಾಗಲಿದೆ.

ಎಲ್ಲಾ ಹಂತಗಳಲ್ಲಿ ಪಕ್ಷದ ಮುಖಂಡತ್ವವನ್ನು ಬೆಳೆಸುವುದು, ಚುರುಕಿನಿಂದ ಕೆಲಸಮಾಡುವ ಪಕ್ಷದ ರಾಜ್ಯ ಮತ್ತು ಜಿಲ್ಲಾ ಕೇಂದ್ರಗಳನ್ನು ಬೆಳೆಸುವುದು, ಸಾಮೂಹಿಕ ಸಂಘಟನೆಗಳು ಮತ್ತು ಹೋರಾಟಗಳಿಗೆ ರಾಜಕೀಯ ನೇತೃತ್ವವನ್ನೀಯುವುದು, ಪ್ರಜಾಪ್ರಭುತ್ವ ಕೇಂದ್ರೀಕೃತವಾದದ ನಿಯಮಗಳ ಆಧಾರದಲ್ಲಿ ಸಾಮೂಹಿಕ ಮುಖಂಡತ್ವವನ್ನು ಬೆಳೆಸುವುದು, ಎಲ್ಲಾ ಹಂತಗಳಲ್ಲಿ ಟೀಕೆ ಸ್ವಯಂ ಟೀಕೆ ಹಾಗೂ ಮೇಲಿನಿಂದ ಕೆಳಗಿನವರೆಗೆ ಮತ್ತು ಕೆಳಗಿನಿಂದ ಮೇಲಿನವರೆಗೆ ಟೀಕೆಯನ್ನು ಸಂಘಟನಾತ್ಮಕವಾಗಿ ನಡೆಸುವುದರ ಮೂಲಕ ತಪ್ಪುಗಳನ್ನು ತಿದ್ದಿಕೊಳ್ಳಲು ಸಾಧ್ಯವಾಗುವಂತೆ ಮಾಡುವುದು-ಇವೆಲ್ಲವುಗಳ ಬಗ್ಗೆ ವಿಮರ್ಶಿಸಬೇಕಾಗಿದೆ; ಸೂಕ್ತ ನಿರ್ಣಯಗಳನ್ನು ಕೈಗೊಳ್ಳಬೇಕಾಗಿದೆ.

ಮಾರ್ಕ್ಸ್‌ವಾದದ ವಿರುದ್ಧ ಕೀಳಾ ಕೆಟ್ಟ ರೀತಿಯ ಪ್ರಚಾರವನ್ನು ಸ್ಥಾಪಿತ ಹಿತಾಸಕ್ತಿಗಳು ನಡೆಸುತ್ತಿರುವಾಗ, ಕಮ್ಯುನಿಸ್ಟರೆಂದರೆ ಕೇವಲ ಕಾರ್ಮಿಕ ಸಂಘಟನೆಗಳನ್ನು ನಡೆಸುವವರು ಮತ್ತು ದೋಚಿ ತಿನ್ನುವವರೆಂಬ ತಪ್ಪು ಕಲ್ಪನೆಯು ಜನತೆಯ ಒಂದು ವಿಭಾಗದ ತಲೆಯಲ್ಲಿರುವಾಗ, ಆರ್ಥಿಕವಾದದಂತಹ ಸಂಕುಚಿತ ಮತ್ತು ಪರಿಷ್ಕರಣವಾದಗಳು ಕಮ್ಯುನಿಸ್ಟ್ ಚಳುವಳಿಯನ್ನು ಇನ್ನೂ ಬಾಧಿಸುತ್ತಲಿರುವಾಗ, ಬೇರೆಬೇರೆ ತಪ್ಪು ಸಿದ್ಧಾಂತಗಳು ಅಡ್ಡಿಮಾಡುತ್ತಲಿರುವಾಗ ಇಂದಿನ ಪರಿಸ್ಥಿತಿಯಲ್ಲಿ ರಾಜ್ಯದ ವಿಶಿಷ್ಟ ಆರ್ಥಿಕ, ಸಾಮಾಜಿಕ, ರಾಜಕೀಯ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಅರಿತು ದುಡಿಯುವ ಜನಕೋಟಿಯನ್ನು ಸಂಘಟಿಸಿ, ಹೋರಾಡುತ್ತಾ ಮುನ್ನಡೆಯಬೇಕು: ಕಾರ್ಮಿಕವರ್ಗವನ್ನು ರಾಜಕೀಯವಾಗಿ ಸಂಘಟಿಸುತ್ತಾ ರಾಜ್ಯದ ಶೋಷಣೆಗೊಳಗಾದ ಎಲ್ಲಾ ಜನತೆಗೆ ನೇತೃತ್ವವನ್ನು ಕೊಡುವತ್ತ ಕಾರ್ಮಿಕವರ್ಗವನ್ನು ತಯಾರಿಸಬೇಕು. ಗ್ರಾಮೀಣ ಪ್ರದೇಶದ ಹಳ್ಳಿಯ ಬಡವರನ್ನು ಸಂಘಟಿಸಿ ಹೋರಾಡುವುದರ ಮೂಲಕ ಸಾಂಪ್ರದಾಯಿಕ ರಾಜಕೀಯವನ್ನು ಬದಲು ಮಾಡಬೇಕು. ವಿದ್ಯಾರ್ಥಿ, ಯುವಜನತೆ, ಮಹಿಳೆಯರು ಮತ್ತು ಬುದ್ಧಿಜೀವಿಗಳು ಹಾಗೂ ಜನತೆಯ ಬೇರೆ ಬೇರೆ ವಿಭಾಗವನ್ನು ಸಂಘಟಿಸಿ ಹೋರಾಡಬೇಕು. ಇವನ್ನೆಲ್ಲಾ ಮಾಡಬೇಕೆನ್ನೋ ನಿಜ. ಆದರೆ ನಮ್ಮ ಮುಂದಿರುವ ಸಮಯ ಅತ್ಯಲ್ಪ, ಘಟನೆಗಳು ಮತ್ತು ಪರಿಸ್ಥಿತಿಗಳಿಗಿಂತ ನಾವು ಹಿಂದೆ ಬೀಳಬಾರದು. ಆದುದರಿಂದ ನಮ್ಮ ಮುಂದಿರುವ, ಪ್ಲೀನಮ್ ಮುಂದಿರುವ ಪ್ರಶ್ನೆ "ಅತ್ಯಲ್ಪ ಕಾಲದಲ್ಲಿ ಅತ್ಯಧಿಕ ಜನತೆಯನ್ನು ಸಂಪರ್ಕಿಸುವುದೆಂತು ?". ೦

ಶಹಾಬಾದ್‌ನ ಎ.ವಿ.ಬಿ. ಕಾರ್ಖಾನೆಯಲ್ಲಿ ಸಿ.ಐ.ಟಿ.ಯು. ಯೂನಿಯನ್ ಸ್ಥಾಪನೆ

ಗುಲ್ಬರ್ಗಾ ಜಿಲ್ಲೆಯಲ್ಲಿರುವ ಶಹಬಾದ್‌ನ ಎ ಸಿ ಸಿ ವರ್ಕ್ಸ್ ಬಾಬ್‌ಕೋಕ್ ಲಿಮಿಟೆಡ್ ಕಾರ್ಖಾನೆಯಲ್ಲಿ ಹೊಸ ಕಾರ್ಮಿಕಸಂಘ ರಚನೆಯಾಗಿ ಅದು ಸಿ.ಐ.ಟಿ.ಯು.ಗೆ ಸೇರಿದೆ.

ದಿನಾಂಕ 8-12-80 ರಂದು ಕಾರ್ಖಾನೆಯ ಎದುರು ನಡೆದ ಕಾರ್ಮಿಕರ ಬಹಿರಂಗ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಸಂಘದ ರಚನೆಗೆ ಇದೇ ಕಾರ್ಖಾನೆಯ ದುರ್ಗಾಪುರ ಘಟಕದ ಸಿ.ಐ.ಟಿ.ಯು. ಮುಖಂಡರು ಸಹಾಯ ಮಾಡಿದರು. ದಿನಾಂಕ 8-12-80ರಂದು ನಡೆದ ಸಭೆಗೆ ಸಿ.ಐ.ಟಿ.ಯು.ವಿನ ಅಖಿಲಭಾರತ ಉಪಾಧ್ಯಕ್ಷರಾದ ಕಾಂ. ಮಹಮ್ಮದ್ ಇಸ್ಮಾಯಿಲ್, ಎಂ.ಪಿ., ದುರ್ಗಾಪುರ ಯೂನಿಯನ್ನಿನ ಉಪಾಧ್ಯಕ್ಷರಾದ ಕಾಂ. ಬಿ. ಚಕ್ರವರ್ತಿ, ಕಾರ್ಯದರ್ಶಿ ಕಾಂ. ಟಿ.ಪಿ. ಗುಪ್ತಾ, ಬಾಬ್‌ಕೋಕ್ ಶ್ರಮಿಕ ಸಂಘದ ಕಾರ್ಯದರ್ಶಿಯಾದ ಕಾಂ. ಎ. ಕೋನಾರ್ ಮತ್ತು ಉಪಕಾರ್ಯದರ್ಶಿಯಾದ ಕಾಂ. ರೈ ಇವರುಗಳು ಭಾಗವಹಿಸಿದ್ದರು. ಇವರ ಜೊತೆಗೆ ಸಿ.ಐ.ಟಿ.ಯು.ವಿನ ಕರ್ನಾಟಕ

[7ನೇ ಪುಟ ನೋಡಿ]

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ನಡೆದು ಬಂದ ದಾರಿ

ಭಾರತ ದೇಶದ ವಿದ್ಯಾರ್ಥಿ ಚಳುವಳಿಯ ಚರಿತ್ರೆಯಲ್ಲಿ ಎಸ್.ಎಫ್.ಐ. ಅಗ್ರಸ್ಥಾನವನ್ನು ಪಡೆದಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಗುಲಾಮಗಿರಿ ಆಳ್ವಿಕೆಯನ್ನು ಕೊನೆಗಾಣಿಸಲು ಭಾರತ ದೇಶದ ಜನತೆ ನಡೆಸಿದ ಚಾರಿತ್ರಿಕ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳು ಪ್ರಶಂಸಾರ್ಹ ಪಾತ್ರ ವಹಿಸಿದ್ದಾರೆ. 1936ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎ.ಐ.ಎಸ್.ಎಫ್.) 'ಶಾಂತಿ', 'ಸ್ವಾತಂತ್ರ್ಯ', 'ಪ್ರಜಾಪ್ರಭುತ್ವ'ಗಳ ಘೋಷಣೆಗಳೊಂದಿಗೆ ದೇಶದ ವಿದ್ಯಾರ್ಥಿ ಚಳುವಳಿಗೆ ಸಮರ್ಥ ಮುಖಂಡತ್ವ ನೀಡಿತ್ತು. ಅನಕ್ಷರತೆ, ಬಡತನ, ದಾರಿದ್ರ್ಯ, ಸುಲಿಗೆ, ಶೋಷಣೆಯನ್ನು ನಿರ್ಮೂಲನಗೊಳಿಸಲು ಬ್ರಿಟಿಷರ ವಿರುದ್ಧ ತ್ಯಾಗ, ಬಲಿದಾನಗಳ ಹೋರಾಟ ನಡೆಸಿದ ಎ.ಐ.ಎಸ್.ಎಫ್. ಅಪ್ರತಿಮ ದಾಖಲೆ ಸ್ಥಾಪಿಸಿದೆ. ಸ್ವಾತಂತ್ರ್ಯ ಭಾರತದ ಅಧಿಕಾರ ಸೂತ್ರ ಹಿಡಿದ ಕಾಂಗ್ರೆಸ್ ಪಕ್ಷ ದೇಶದಜನತೆಯ ಹಾಗೂ ವಿದ್ಯಾರ್ಥಿಗಳ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವದಾಗಿ ನೀಡಿದ್ದ ಭರವಸೆ ಸುಳ್ಳಾಯಿತು. ಬದಲಾಗಿ ಎರಡು ದಶಕಗಳ ನಂತರವೂ ಸಮಸ್ಯೆಗಳು ದಿನೇ ದಿನೇ ಬೃಹದಾಕಾರವಾಗಿ ಬೆಳೆದವು. ಎ.ಐ.ಎಸ್.ಎಫ್.ನ ಪ್ರಥಮ ಅಧ್ಯಕ್ಷರಾದ ಜವಹರಲಾಲ್ ನೆಹರೂರವರೇ ದೇಶದ ಮೊಟ್ಟಮೊದಲ ಪ್ರಧಾನಿಯಾದರೂ ವಿದ್ಯಾರ್ಥಿ ಯುವಜನತೆಗೆ, ಉತ್ತಮ ಭವಿಷ್ಯ ನಿರ್ಮಾಣ ಮಾಡುವಲ್ಲಿ ಕಾಂಗ್ರೆಸ್ ವಿಫಲವಾಯಿತು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಹೋರಾಟದ ಹಾದಿಯಿಂದ ವಿಮುಖಗೊಳಿಸುವ ಪ್ರಯತ್ನ ನಡೆದವು. ಹೀಗಿದ್ದಾಗ್ಯೂ ಆಳುವ ಸರಕಾರವೇ ವಿದ್ಯಾರ್ಥಿ ಯುವಜನತೆಯ ಎಲ್ಲಾ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುತ್ತದೆಂಬ ತಪ್ಪು ಕಲ್ಪನೆಯನ್ನು ಹೂಡಿದ ಎ.ಐ.ಎಸ್.ಎಫ್. ನಾಯಕತ್ವ ಸಮರಶೀಲತೆಯನ್ನು ಕಳೆದುಕೊಂಡು ಆಳುವ ಸರಕಾರದ ಕೈಗೊಂಬೆಯಾಯಿತು. ಇನ್ನೊಂದೆಡೆ ಆಳುವ ವರ್ಗದ ವಿವಿಧ ಪಕ್ಷಗಳು ಅನೇಕ ಹೊಸ ವಿದ್ಯಾರ್ಥಿ ಸಂಘಟನೆಗಳನ್ನು ಸ್ಥಾಪಿಸಿ ವಿದ್ಯಾರ್ಥಿಗಳ ಶಕ್ತಿಯನ್ನು ದುರುಪಯೋಗಪಡಿಸಿಕೊಳ್ಳಲು ಪ್ರಾರಂಭಿಸಿದರು. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ದೇಶದ ವಿದ್ಯಾರ್ಥಿ ಸಮುದಾಯವನ್ನು ಪರಿಷ್ಕರಣವಾದದಿಂದ ಪಾರು ಮಾಡಲು, ಪ್ರತಿಗಾಮೀ ಶಕ್ತಿಗಳಿಂದ ದೂರವಿಡಲು ಹಾಗೂ ವಿದ್ಯಾರ್ಥಿ ಚಳುವಳಿಗೆ ಕ್ರಾಂತಿಕಾರೀ ಚೇತನವನ್ನು ನೀಡಲು ಎ.ಐ.ಎಸ್.ಎಫ್. ಮುಖಂಡತ್ವದ ಒಂದು ಭಾಗ ತೀವ್ರವಾದ ಪ್ರಯತ್ನದಲ್ಲಿ ತೊಡಗಿತು. ಈ ಪ್ರಯತ್ನದ ಪ್ರತಿಫಲವಾಗಿಯೇ 1970ರ ಡಿಸೆಂಬರ್‌ನಲ್ಲಿ ಕೇರಳದ ತಿರುವನಂತಪುರದಲ್ಲಿ ದೇಶದ ವಿವಿಧ ಭಾಗಗಳ ವಿದ್ಯಾರ್ಥಿ ಪ್ರತಿನಿಧಿಗಳ ಸಮ್ಮೇಳನ ನಡೆದು ಸುದೀರ್ಘವಾದ, ಮಹತ್ವಪೂರ್ಣವಾದ ಚರ್ಚೆಯ ನಂತರ 1970ರ ಡಿಸೆಂಬರ್ 30ರಂದು ಎಸ್.ಎಫ್.ಐ. ಸ್ಥಾಪನೆಯಾಯಿತು. 'ಸ್ವಾತಂತ್ರ್ಯ', 'ಪ್ರಜಾಪ್ರಭುತ್ವ', 'ಸಮಾಜವಾದ'ಗಳ ಘೋಷಣೆಗಳು ಮೊಳಗಿದವು. ಕೆಂಪು ನಕ್ಷತ್ರ ಉದಯಿಸಿತು.

ಪರಿಷ್ಕರಣವಾದದ ವಿರುದ್ಧದ ಈ ಹೋರಾಟ ಅನಿವಾರ್ಯವಾಗಿತ್ತು. ಎಸ್.ಎಫ್.ಐ.ನ ಈ ಸ್ಥಾಪನಾ ಸಮ್ಮೇಳನವು ದೇಶದ ವಿದ್ಯಾರ್ಥಿ ಸಮುದಾಯದ ಐಕ್ಯತೆಯು ಛಿದ್ರವಾಗುತ್ತಿರುವದನ್ನು ಗಂಭೀರವಾಗಿ ಗಮನಿಸಿ ಎಲ್ಲ ಪ್ರಗತಿಪರ ಸಂಘಟನೆಗಳು "ಐಕ್ಯ ಹೋರಾಟ"ಕ್ಕೆ ಮುಂದಾಗಲು ಕರೆ ನೀಡಿತು. ಅಂದಿನಿಂದಲೂ ದೇಶದ ವಿದ್ಯಾರ್ಥಿ ಯುವಜನತೆಯ ಐಕ್ಯತೆಗಾಗಿ ಎಸ್.ಎಫ್.ಐ. ಶ್ರಮಿಸುತ್ತಿದೆ. ಇದರ ಫಲವಾಗಿ ಇಂದು ಎಸ್.ಎಫ್.ಐ.ನ ಪ್ರಯತ್ನದಿಂದ ದೇಶದ ಏಳು ವಿದ್ಯಾರ್ಥಿ ಯುವಜನ ಸಂಘಟನೆಗಳು, ಸರ್ವಾಧಿಕಾರೀ-ಜಾತೀಯವಾದೀ ಶಕ್ತಿಗಳನ್ನು ಸೋಲಿಸಲು ಒಂದಾಗಿ ನಿಂತಿದೆ.

ಎಸ್.ಎಫ್.ಐ. ವಿದ್ಯಾರ್ಥಿ ಸಮುದಾಯದ ದಿನನಿತ್ಯದ ಬೇಡಿಕೆಗಳಿಗಾಗಿ ಸ್ಥಳೀಯವಾಗಿ, ರಾಜ್ಯ ಮಟ್ಟದಲ್ಲಿ ಅನೇಕ ಹೋರಾಟಗಳನ್ನು ನಡೆಸಿ ಜಯಗಳಿಸಿದೆ. ಮಾತ್ರವಲ್ಲದೆ ರಾಷ್ಟ್ರಮಟ್ಟದಲ್ಲಿ ಪ್ರತಿವರ್ಷ ಬೇಡಿಕೆ ದಿನಾಚರಣೆ ಆಚರಿಸುವ ಮೂಲಕ ವೈಜ್ಞಾನಿಕ-ವೃತ್ತಿಪರ ಶಿಕ್ಷಣ, ಉಚಿತ ಮತ್ತು ಕಡ್ಡಾಯ ಶಿಕ್ಷಣ, ಉದ್ಯೋಗದ ಅವಕಾಶ ಸಿಗುವವರೆಗೆ ನಿರುದ್ಯೋಗ ಭತ್ಯೆ ಮುಂತಾದ ವಿದ್ಯಾರ್ಥಿಗಳ ಮುಖ್ಯ ಬೇಡಿಕೆಗಳ ಬಗ್ಗೆ ಸರ್ಕಾರದ ಮೇಲೆ ಒತ್ತಾಯ ತರುತ್ತಿದೆ.

ಕರ್ನಾಟಕದಲ್ಲೂ ಎಸ್.ಎಫ್.ಐ. ಅನೇಕ ಹೋರಾಟಗಳನ್ನು ನಡೆಸಿದೆ. ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯಗಳ ದುರಾಡಳಿತದ ವಿರುದ್ಧದ ಹೋರಾಟದಲ್ಲಿ ಎಸ್.ಎಫ್.ಐ. ಸಕ್ರಿಯ ಪಾತ್ರ ವಹಿಸಿತು. ಹಾಸ್ಟೆಲ್‌ಗಳಲ್ಲಿನ ಭ್ರಷ್ಟಾಚಾರ, ಅಧ್ಯಾಪಕರ ಕೊರತೆ, ಕ್ಯಾಂಟೀನ್ ಗ್ರಂಥಭಂಡಾರ ಇತ್ಯಾದಿ ಬೇಡಿಕೆಗಳಿಗಾಗಿ ಸತತ ಹೋರಾಟಗಳನ್ನು ನಡೆಸಿ ಹಲವಾರು ಕಡೆ ಜಯಗಳಿಸಿದೆ. ಬರಗಾಲ ಪೀಡಿತ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಫೀ ರದ್ದತಿಗಾಗಿ ಹೋರಾಟ ನಡೆಸಿದೆ. ಬಡವಿದ್ಯಾರ್ಥಿಗಳನ್ನು ಸುಲಿಗೆ ಮಾಡುವ ಡೊನೇಶನ್ ಪದ್ಧತಿಯ ವಿರುದ್ಧ ರಾಜ್ಯದ ನಾನಾ ಕಡೆ ತೀವ್ರ ಹೋರಾಟ ನಡೆಸಲಾಗಿದೆ. 77-78ರಲ್ಲಿ ತಿಪಟೂರು ಶಾಖೆಯು ಡೊನೇಶನ್ ರದ್ದತಿಗಾಗಿ ನಡೆಸಿದ ಹೋರಾಟದ ಪರಿಣಾಮವಾಗಿ ರಾಜ್ಯಶಾಖೆಯ ಹಾಲಿ ಪ್ರಧಾನ ಕಾರ್ಯದರ್ಶಿಯನ್ನು 'ಡಿಸ್‌ಮಿಸ್' ಮಾಡಿದ್ದಲ್ಲದೆ 15 ಮಂದಿ ಎಸ್.ಎಫ್.ಐ. ಮುಖಂಡರನ್ನು ಕಾಲೇಜಿನಿಂದ ಸಸ್ಪೆಂಡ್ ಮಾಡಲಾಯಿತು. ನಂತರ ತಿಪಟೂರು ಕೋರ್ಟ್ ಹಾಗೂ ಬೆಂಗಳೂರು ಹೈಕೋರ್ಟ್‌ಗಳಲ್ಲಿ ಈ ಅಕ್ರಮ ಶಿಕ್ಷೆಯನ್ನು ವಿರೋಧಿಸಿ ಮೊಕದ್ದಮೆ ಹೂಡಿ ಜಯಗಳಿಸಿ ದಾಖಲೆಯೊಂದನ್ನು ನಿರ್ಮಿಸಲಾಯಿತು.

1973-74ರಲ್ಲಿ ದೇಶದಾದ್ಯಂತ ನಡೆದ ಬೆಲೆಏರಿಕೆ ವಿರೋಧಿ ಚಳುವಳಿಯಲ್ಲಿ ಎಸ್.ಎಫ್.ಐ. ಸಕ್ರಿಯ ಪಾತ್ರ ವಹಿಸಿತ್ತು. ಬೆಲೆಏರಿಕೆಯನ್ನು ವಿರೋಧಿಸಿ ಕರ್ನಾಟಕದಲ್ಲೂ ಎಸ್.ಎಫ್.ಐ. ಸಭೆ, ಮೆರವಣಿಗೆಗಳ ಮೂಲಕ ಪ್ರತಿಭಟಿಸಲಾಯಿತು. ಈ ಸಂದರ್ಭದಲ್ಲಿ ಕೋಲಾರ ಜಿಲ್ಲೆಯಲ್ಲಿ ಗೋಲಿಬಾರ್ ಮಾಡಿದ್ದಲ್ಲದೆ 40 ಮಂದಿ ಕಾರ್ಯಕರ್ತರ ಮೇಲೆ ಪೋಲೀಸರು ಸುಳ್ಳು ಮೊಕದ್ದಮೆಗಳನ್ನು ಹೂಡಿದರು. ಇತರೆ ಭಾಗಗಳಲ್ಲಿ ಲಾಠಿಚಾರ್ಜ್ ನಡೆಸಲಾಯಿತು.

1975ರ ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಎಸ್.ಎಫ್.ಐ. ದೇಶದಾದ್ಯಂತ ತೀವ್ರ ಪ್ರತಿಭಟನೆ, ಭೂಗತ ಚಳುವಳಿಗಳನ್ನು, ಸಭೆಗಳನ್ನು ನಡೆಸಿತು. ಕರ್ನಾಟಕದಲ್ಲಿ ಬೆಂಗಳೂರು, ತುಮಕೂರು, ಚಿತ್ರದುರ್ಗ, ಧಾರವಾಡ ಮುಂತಾದ ಜಿಲ್ಲೆಗಳಲ್ಲಿ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಗುಪ್ತಪ್ರಚಾರ ನಡೆಸಲಾಯಿತು. ಈಗಿನ ಮಲಪ್ರಭಾ ರೈತ ಸಮನ್ವಯ ಸಮಿತಿಯ ಸಂಚಾಲಕರೂ, ರಾಜ್ಯ ಶಾಖೆಯ ಮಾಜಿ ಅಧ್ಯಕ್ಷರೂ ಆದ ಕಾಂ ವಿ ಎನ್. ಹಳಕಟ್ಟಿಯವರು ತುರ್ತುಸ್ಥಿತಿಯ ಸಮಯದಲ್ಲಿ ಸ್ವಲ್ಪ ಕಾಲ ಭೂಗತ ಚಟುವಟಿಕೆ ನಡೆಸಿದರು. 1977ರ ಸರ್ವಾಧಿಕಾರಿ ವಿರೋಧಿ ಚುನಾವಣಾ ಪ್ರಚಾರದಲ್ಲಿ ಪ್ರಶಂಸಾರ್ಹ ಪಾತ್ರವಹಿಸಿದ ಎಸ್.ಎಫ್.ಐ. ರಾಜ್ಯದಲ್ಲಿ ಹಲವಾರು ಜಿಲ್ಲೆಗಳಲ್ಲಿ ವ್ಯಾಪಕ ಪ್ರಚಾರ ನಡೆಸಿತು.

1977ರಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯಗಳನ್ನು ನೀಡದೆ ಸೆಮಿಸ್ಟರ್ ಪದ್ಧತಿಯನ್ನು ಹೇರುವುದನ್ನು ವಿರೋಧಿಸಿ ಬೆಂಗಳೂರಿನಲ್ಲಿ ಈ ಬಗ್ಗೆ ಒಂದು ವಿಚಾರ ಸಂಕಿರಣ ನಡೆಸಲಾಯಿತು. ಅಲ್ಲದೆ ಕನಿಷ್ಠ ಅಂಕಗಳನ್ನು ಶೇ. 40ಕ್ಕೆ ಏರಿಸುವುದನ್ನು ಪ್ರತಿಭಟಿಸಿ ಬೆಂಗಳೂರು ವಿ.ವಿ. ಪ್ರದೇಶದಲ್ಲಿ ಸಹಿಸಂಗ್ರಹ ಚಳುವಳಿ ನಡೆಸಲಾಯಿತು.

1977ರಲ್ಲಿ ನವದೆಹಲಿಯಲ್ಲಿ 'ಶಿಕ್ಷಣ'ದ ಕುರಿತು ಒಂದು ರಾಷ್ಟ್ರೀಯ ಸಮಾವೇಶ ನಡೆಸಲಾಯಿತು. ಪುರೋಗಾಮಿ ಚರಿತ್ರೆ ಪುಸ್ತಕಗಳನ್ನು ನಿಷೇಧ ಮಾಡಿದ ಜನತಾ ಸರ್ಕಾರದ ಕ್ರಮವನ್ನು ಎಸ್.ಎಫ್.ಐ. ಉಗ್ರವಾಗಿ ಖಂಡಿಸಿತು. ತನ್ನ ವಾಗ್ದಾನದಂತೆ ಪ್ರಜಾಪ್ರಭುತ್ವ ಹಕ್ಕುಗಳನ್ನು ಪುನಃ ನೀಡುವಂತೆ ಜನತಾ ಸರ್ಕಾರವನ್ನು ಒತ್ತಾಯಿಸಿದ್ದಲ್ಲದೆ ಸಂವಿಧಾನದ 42ನೇ ತಿದ್ದುಪಡಿಯನ್ನು ಪೂರ್ಣ ರದ್ದು ಮಾಡುವಂತೆಯೂ ಒತ್ತಾಯಿಸಲಾಯಿತು. ಸಂವಿಧಾನದಲ್ಲಿ ಸ್ಥಾನಬದ್ಧತಾ ಕಾಯಿದೆ ಮತ್ತು ತುರ್ತುಪರಿಸ್ಥಿತಿಯನ್ನು ಹೇರಿರುವ ಅವಕಾಶಗಳನ್ನು ತೆಗೆದುಹಾಕುವಂತೆ ಎಸ್.ಎಫ್.ಐ. ಜನತಾ ಸರ್ಕಾರವನ್ನು ಒತ್ತಾಯಿಸಿತು. ಇದಕ್ಕೆ ತದ್ವಿರುದ್ಧವಾಗಿ ಜನತಾ ಸರ್ಕಾರವು ಮಧ್ಯಪ್ರದೇಶದಲ್ಲಿ 'ಮಿನಿ ತುರ್ತುಪರಿಸ್ಥಿತಿ'ಯನ್ನು ಹೇರಿದ್ದರ ವಿರುದ್ಧ ಉಗ್ರವಾಗಿ ಪ್ರತಿಭಟಿಸಲಾಯಿತು. ಜನತಾ ಸರ್ಕಾರದ ಆಳ್ವಿಕೆಯಲ್ಲಿ ಜಾತೀವಾದಿ ಶಕ್ತಿಗಳು, ಪ್ರಬಲವಾಗುತ್ತಿದುದನ್ನು ಹಾಗೂ ಜನತಾ ಸರಕಾರದ ಒಳಜಗಳ, ವೈಫಲ್ಯಗಳಿಂದ ಲಾಭ ಪಡೆದು ಸರ್ವಾಧಿಕಾರಿ ಶಕ್ತಿಗಳು ಪುನಃ ತಲೆಯೆತ್ತಲು ಪ್ರಯತ್ನಿಸುತ್ತಿರುವುದನ್ನು ಗಂಭೀರವಾಗಿ ಗಮನಿಸಿತು. ಎಸ್.ಎಫ್.ಐ. ತನ್ನ ಪರಿಶ್ರಮದಿಂದಾಗಿ 1979ರಲ್ಲಿ ದೆಹಲಿಯಲ್ಲಿ ಇತರೆ ಆರು ವಿದ್ಯಾರ್ಥಿ-ಯುವಜನ ಸಂಘಟನೆಗಳನ್ನು ಐಕ್ಯಕಾರ್ಯಚರಣೆಗೆ ತಂದು 'ಸರ್ವಾಧಿಕಾರೀ-ಜಾತೀವಾದೀ ವಿರೋಧಿ ಸಮಾವೇಶ'ವನ್ನು ಯಶಸ್ವಿಯಾಗಿ ನಡೆಸಿ ದೇಶದಾದ್ಯಂತ ಈ ಅಪಾಯಗಳ ಬಗ್ಗೆ ವಿದ್ಯಾರ್ಥಿ-ಯುವಜನರ ನಡುವೆ ಪ್ರಚಾರ ನಡೆಸಲಾಯಿತು. 1980ರ ಲೋಕಸಭಾ ಚುನಾವಣೆಯಲ್ಲಿ ಇಡೀ ದೇಶದಾದ್ಯಂತ ಸರ್ವಾಧಿಕಾರಿ ಹಾಗೂ ಜಾತೀವಾದೀ ಶಕ್ತಿಗಳ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವ ರಂಗಕ್ಕೆ ಬೆಂಬಲ ನೀಡಿ, ಪರಿಣಾಮಕಾರಿ ಪ್ರಚಾರ ನಡೆಸಲಾಯಿತು. ಇದೇ ಸಂದರ್ಭದಲ್ಲಿ 'ಮಣ್ಣಿನ ಮಕ್ಕಳವಾದ' ಇತ್ಯಾದಿ ಸಂಕುಚಿತವಾದಿ ಪ್ರಭಾವದಿಂದ ಬೆಳೆದುಬಂದ ಅಸ್ಸಾಂ ಪ್ರತ್ಯೇಕತಾವಾದಿ ಚಳುವಳಿಯ ವಿರುದ್ಧ ಮುಖ್ಯವಾಗಿ ಅಸ್ಸಾಂ, ಪ. ಬಂಗಾಳ, ತ್ರಿಪುರಾ ರಾಜ್ಯಗಳಲ್ಲಿ ಮತ್ತು ದೇಶದ ಇತರೆಡೆ ಎಸ್.ಎಫ್.ಐ. ತೀವ್ರವಾದ ಹೋರಾಟ ನಡೆಸುತ್ತಿದೆ. ಈಶಾನ್ಯ ಭಾರತದ ಪ್ರತ್ಯೇಕತಾವಾದಿ ಶಕ್ತಿಗಳ ಮತ್ತು ವಿದೇಶಿ ಏಜೆಂಟರ ಪಿತೂರಿಯಿಂದ ದೇಶದ ಐಕ್ಯತೆಯ ರಕ್ಷಣೆಗೆ ವಿದ್ಯಾರ್ಥಿಗಳನ್ನು ಎಚ್ಚರಗೊಳಿಸಲು 1980ರ ಏಪ್ರಿಲ್‌ನಲ್ಲಿ ಇತರ ಆರು ವಿದ್ಯಾರ್ಥಿ-ಯುವಜನ ಸಂಘಟನೆಗಳೊಂದಿಗೆ ಸೇರಿ ದೆಹಲಿಯಲ್ಲಿ 'ರಾಷ್ಟ್ರೀಯ ಐಕ್ಯತಾ ಸಮಾವೇಶ'ವನ್ನು ನಡೆಸಲಾಯಿತು. ಆಗಸ್ಟ್ 21ರಂದು ದೇಶದಾದ್ಯಂತ 'ಏಕತಾ ದಿವಸ'ವನ್ನು ಆಚರಿಸಲಾಯಿತು. ಇತ್ತೀಚೆಗೆ ಕೇರಳ, ಒರಿಸ್ಸಾ, ಪಂಜಾಬ್, ಹಿಮಾಚಲಪ್ರದೇಶ, ಹರಿಯಾಣ ಮುಂತಾದ ಕಡೆ ಬಸ್ ಪ್ರಯಾಣದರ ಏರಿಕೆ ವಿರುದ್ಧ ಮತ್ತು ಇತರ ಕೆಲವು ಬೇಡಿಕೆಗಳಿಗಾಗಿ ರಾಜ್ಯಮಟ್ಟದಲ್ಲಿ ಪರಿಣಾಮಕಾರಿಯಾದ ಐಕ್ಯ ಹೋರಾಟಗಳನ್ನು ನಡೆಸುತ್ತಿದೆ. ದೇಶದಾದ್ಯಂತ ನಡೆಯುತ್ತಿರುವ ರೈತ ಚಳುವಳಿ ಮತ್ತು ಬೆಲೆ ಏರಿಕೆ ವಿರುದ್ಧದ ಚಳುವಳಿಗೆ ಎಸ್.ಎಫ್.ಐ. ಸಕ್ರಿಯ ಬೆಂಬಲ ನೀಡುತ್ತಿದೆ. ಕರ್ನಾಟಕ ರಾಜ್ಯದ ಚಾರಿತ್ರಿಕ ರೈತಹೋರಾಟದಲ್ಲಿ ಎಸ್.ಎಫ್.ಐ. ಭಾಗವಹಿಸುತ್ತಿದ್ದು ಇನ್ನೂ ಹೆಚ್ಚಿನ ವಿದ್ಯಾರ್ಥಿಗಳ ಬೆಂಬಲವನ್ನು ಸಂಘಟಿಸಲು ಪ್ರಯತ್ನ ನಡೆಸಲಾಗುತ್ತಿದೆ. ರಾಜ್ಯದ ರೈತ-ಕಾರ್ಮಿಕರ ಹೋರಾಟಗಳಿಗೆ ಸೌಹಾರ್ದ ಬೆಂಬಲ ನೀಡುತ್ತಿರುವ ಎಸ್.ಎಫ್.ಐ. ದುಡಿಯುವ ವರ್ಗದೊಡನೆ ತನ್ನ ಸಖ್ಯತೆಯನ್ನು ಬಲಪಡಿಸುತ್ತಿದೆ. ಕರ್ನಾಟಕದಲ್ಲೂ ಮತ್ತು ಇಡೀ ದೇಶದಾದ್ಯಂತ ಎಸ್.ಎಫ್.ಐ. ದಿನೇದಿನೇ ಬಲಿಷ್ಟವಾಗಿ ಬೆಳೆಯುತ್ತಿದೆ.

ಎಸ್.ಎಫ್.ಐ. ಸ್ಥಾಪನೆಯಾದ ಒಂದೆರಡು ವರ್ಷಗಳಲ್ಲೇ ಪ. ಬಂಗಾಲದಲ್ಲಿ ಅರೆಫ್ಯಾಸಿಸ್ಟ್ ದಬ್ಬಾಳಿಕೆ ಎದುರಿಸಬೇಕಾಯಿತು. ನಂತರ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ದೇಶದಾದ್ಯಂತ ಸಂಘಟನೆಯು ತೀವ್ರ ಧಾಳಿ-ದಬ್ಬಾಳಿಕೆಗೆ ತುತ್ತಾಯಿತು. ಕಳೆದ ಒಂದೆರಡು ವರ್ಷಗಳಿಂದ ಎಸ್.ಎಫ್.ಐ. ದೇಶದ ಅನೇಕ ಭಾಗಗಳಲ್ಲಿ ಪ್ರತ್ಯೇಕತಾವಾದಿ ಮತ್ತು ಕೋಮುವಾದೀ ಶಕ್ತಿಗಳ ಸವಾಲನ್ನು ಎದುರಿಸುತ್ತಿದೆ. ಇಷ್ಟೆಲ್ಲ ಅಡ್ಡಿ ಆತಂಕಗಳನ್ನು ಎದುರಿಸಿಯೂ ಎಸ್.ಎಫ್.ಐ. ಸಂಘಟನೆಯು ಇಂದು ದೇಶದ ಅತ್ಯಂತ ಬಲಿಷ್ಠ ವಿದ್ಯಾರ್ಥಿ ಸಂಘಟನೆಯಾಗಿ ಬೆಳೆದುಬಂದಿದೆ. 1970ರಲ್ಲಿ ಕೇವಲ 1 ಲಕ್ಷದ 23 ಸಾವಿರ ಸದಸ್ಯರನ್ನು ಹೊಂದಿದ್ದ ಈ ಸಂಘಟನೆ ಇಂದು 5ಲಕ್ಷಕ್ಕೂ ಮೀರಿ ಸದಸ್ಯರನ್ನು ಒಳಗೊಂಡಿದೆ. ಸಾವಿರಾರು ಶಾಲಾ-ಕಾಲೇಜುಗಳ ವಿದ್ಯಾರ್ಥಿ ಸಂಘಗಳ ಚುನಾವಣೆಯಲ್ಲಿ ಎಸ್.ಎಫ್.ಐ. ಪ್ರಚಂಡ ಜಯಗಳಿಸಿದೆ. ದೇಶದ ಹಲವಾರು ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಸಂಘಗಳಲ್ಲಿ ಎಸ್.

(7ನೇ ಪುಟ ನೋಡಿ)

ಬೇಡಿಕೆ ಈಡೇರದಿದ್ದರೆ ಉಗ್ರ ಹೋರಾಟ : ಪ್ರಾಂತ ರೈತಸಂಘದ ಎಚ್ಚರಿಕೆ

ತಾವು ಸಲ್ಲಿಸಿರುವ ರೈತರ ಬೇಡಿಕೆಗಳನ್ನು ಈಡೇರಿಸದಿದ್ದರೆ ಉಗ್ರ ಹೋರಾಟವನ್ನು ಎದುರಿಸಲು ತಯಾರಾಗಿ ಎಂಬ ಗಂಭೀರ ಎಚ್ಚರಿಕೆಯನ್ನು ಕರ್ನಾಟಕ ಸರ್ಕಾರಕ್ಕೆ ಪ್ರಾಂತ ರೈತಸಂಘದ ನಾಯಕರು ಕೊಟ್ಟಿದ್ದಾರೆ.

ಡಿ. 12ರಂದು ಬೆಂಗಳೂರಿನಲ್ಲಿ ಪ್ರಾಂತ ರೈತಸಂಘ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಎಲ್ಲ ರೈತ ಮುಖಂಡರೂ ಸರ್ಕಾರಕ್ಕೆ ತೀವ್ರ ಹೋರಾಟದ ಬೆದರಿಕೆ ಹಾಕಿದರು.

ಹೊಸ ಜಾಗೃತಿ

ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಹುಗವಾಳಪ್ಪ ಅವರು ಮಾತನಾಡಿ ಬಹಳ ಕಾಲದಿಂದ ನಿದ್ರೆ ಮಾಡುತ್ತಿದ್ದ ರಾಜ್ಯದ ರೈತರನ್ನು ಮಲಪ್ರಭ ರೈತ ಚಳುವಳಿಯು ಬಡಿದೆಬ್ಬಿಸಿ ರೈತರಲ್ಲಿ ಹೊಸ ಜಾಗೃತಿ ತಂದಿದೆ ಎಂದು ನುಡಿದರು. ಡಿ. 12ರಂದು ನಡೆದ ರೈತ-ಕಾರ್ಮಿಕರ ರ್‍ಯಾಲಿಯನ್ನು ಒಂದು ಚಾರಿತ್ರಿಕ ಘಟನೆ ಎಂದು ಬಣ್ಣಿಸಿದ ಪ್ರಾಂತ ರೈತಸಂಘದ ಅಧ್ಯಕ್ಷರು, ಬರಗಾಲದಿಂದ ಪರಿತಪಿಸುತ್ತಿರುವ ರೈತರ ಕಷ್ಟ ಕೇಳಲು ಮುಖ್ಯಮಂತ್ರಿಗಳು ಗೈರುಹಾಜರಾದ ಬಗ್ಗೆ ವಿಷಾದ ವ್ಯಕ್ತಪಡಿಸಿದರು. ರೈತರ ಬಗ್ಗೆ ಸ್ವಲ್ಪವೂ ಸೌಜನ್ಯ ತೋರದ ಮುಖ್ಯಮಂತ್ರಿಗಳ ವರ್ತನೆಯು ಅಧಿಕಾರಶಾಹಿ ಮನೋಭಾವ ಹಾಗೂ ದರ್ಪವನ್ನು ತೋರಿಸುತ್ತದೆಂದು ಟೀಕಿಸಿದರು.

ತಾರತಮ್ಯ ನೀತಿ ಖಂಡನೆ

ಸಭೆಯನ್ನುದ್ದೇಶಿಸಿ ಮಾತನಾಡಿದ ಮಲಪ್ರಭ ರೈತ ಚಳುವಳಿ ಸಮನ್ವಯ ಸಮಿತಿಯ ಸದಸ್ಯ ಕಾಂ. ಹಳಕಟ್ಟಿಯವರು ಡಿ. 12ರ ಮತಪ್ರದರ್ಶನವನ್ನು ರಾಜ್ಯದ ಕ್ರಾಂತಿಕಾರಿ ಚಳುವಳಿಯಲ್ಲಿ ಅತ್ಯಂತ ಚಾರಿತ್ರಿಕವಾದ ಸಂದರ್ಭ ಎಂದು ವರ್ಣಿಸಿದರು.

ರೈತಸಂಘಗಳ ನಡುವೆ ತಾರತಮ್ಯ ನೀತಿಯನ್ನು ಅನುಸರಿಸುತ್ತಿರುವ ಮುಖ್ಯಮಂತ್ರಿಯವರ ಧೋರಣೆಯನ್ನು ಖಂಡಿಸಿದ ಹಳಕಟ್ಟಿಯವರು ಪ್ರಾಂತ ರೈತಸಂಘ ಸಲ್ಲಿಸಿರುವ ಬೇಡಿಕೆ ಈಡೇರದಿದ್ದರೆ ಉಗ್ರ ಹೋರಾಟ ಹೂಡುವುದಾಗಿ ಎಚ್ಚರಿಕೆ ಕೊಟ್ಟರು.

ನರಗುಂದದಲ್ಲಿ ಆರಂಭಗೊಂಡ ರೈತರ ಹೋರಾಟವು ಇಂದು ಇಡೀ ರಾಜ್ಯ ಹಾಗೂ ರಾಷ್ಟ್ರದಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿದ್ದು, ಇದು ಸರ್ಕಾರದ ರೈತವಿರೋಧಿ ನೀತಿಗಳ ವಿರುದ್ಧ ರೈತರ ಅಸಮಾಧಾನ ಹಾಗೂ ಆಕ್ರೋಶವನ್ನು ಪ್ರತಿಬಿಂಬಿಸುತ್ತದೆ ಎಂದು ಹಳಕಟ್ಟಿ ಹೇಳಿದರು.

ಕಾರ್ಮಿಕ ವಿರೋಧಿ ಅಲ್ಲ

ರೈತ ಹೋರಾಟವು ನಗರಗಳಲ್ಲಿರುವ ಕಾರ್ಮಿಕರ ವಿರೋಧಿ ಹೋರಾಟ ಎಂಬ ಬಣ್ಣ ಕೊಡಲು ಕೆಲವು ಸ್ಥಾಪಿತ ಹಿತಾಸಕ್ತಿಗಳು ಪ್ರಯತ್ನಿಸುತ್ತಿರುವುದನ್ನು ತೀವ್ರವಾಗಿ ಆಕ್ಷೇಪಿಸಿದ ಹಳಕಟ್ಟಿಯವರು, ದುಡಿಯುವ ಜನರೆಲ್ಲಾ ಒಂದೇ ಎಂಬುದನ್ನು ಇಂದು ಬೆಂಗಳೂರಿನ ಕಾರ್ಮಿಕವರ್ಗ ರೈತರ ರ್‍ಯಾಲಿಯಲ್ಲಿ ಪಾಲ್ಗೊಳ್ಳುವುದರ ಮೂಲಕ ತೋರಿಸಿಕೊಟ್ಟಿದೆ ಎಂದರು.

ರೈತರ ಹೋರಾಟದ ಹಿನ್ನೆಲೆಯಲ್ಲಿ ಯಾವ ರಾಜಕೀಯ ಶಕ್ತಿಗಳೂ ಇಲ್ಲ ಎಂದು ಸ್ಪಷ್ಟಪಡಿಸಿದ ಹಳಕಟ್ಟಿಯವರು ದಿನದಿಂದ ದಿನಕ್ಕೆ ಕಷ್ಟಗಳಿಗೆ ಒಳಗಾಗುವಂತಹ ಪರಿಸ್ಥಿತಿಯೇ ರೈತರನ್ನು ಹೋರಾಟಕ್ಕೆ ತಳ್ಳಿದೆ ಎಂದರು. ಹಳ್ಳಿಯ ರೈತರು ಮತ್ತು ನಗರ ಪ್ರದೇಶಗಳ ಕಾರ್ಮಿಕರು ಒಂದಾದರೆ ಬಡಜನತೆಯ ವಿರೋಧಿ ರಾಜ್ಯಶಕ್ತಿಯನ್ನು ಸೋಲಿಸಲು ಸಾಧ್ಯ ಎಂದೂ ಸಹ ಅವರು ಹೇಳಿದರು.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ರಾಜ್ಯದಲ್ಲಿ ಒಂದಾಗಿ ಕಾರ್ಯ ನಿರ್ವಹಿಸುತ್ತಿಲ್ಲದಿರುವುದಕ್ಕೆ ಮತ್ತು ಮಲಪ್ರಭ ರೈತಹೋರಾಟದ ಕಾವು ಆರಿಹೋಗುತ್ತಿರುವುದಕ್ಕೆ ವ್ಯಥೆಪಟ್ಟ ಹಳಕಟ್ಟಿಯವರು ಇಂದಿನ ರೈತಕಾರ್ಮಿಕರ ಬೃಹತ್ ರ್‍ಯಾಲಿಯು ಜನಹೋರಾಟಗಳಿಗೆ ಚೇತನ ತರಲಿ ಎಂದು ಆಶಿಸಿದರು.

ಕೃಷಿ ಕಾರ್ಮಿಕರಿಗೆ ನಿವೃತ್ತಿ ವೇತನ

ಕೇರಳ ಮತ್ತು ಪ. ಬಂಗಾಳ ಸರ್ಕಾರಗಳು ಕೊಡುತ್ತಿರುವಂತೆ ರಾಜ್ಯದ ಕೃಷಿಕಾರ್ಮಿಕರಿಗೂ 55 ವರ್ಷಗಳಾದ ನಂತರ ನಿವೃತ್ತಿವೇತನ ಕೊಡಬೇಕೆಂದು ಕೋಲಾರ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿಯವರು ಸರ್ಕಾರವನ್ನು ಒತ್ತಾಯಿಸಿದರು.

ಬರಗಾಲದಿಂದ ಅತ್ಯಂತ ಬವಣೆ ಪಡುತ್ತಿರುವ ಕೋಲಾರ ಜಿಲ್ಲೆಯನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಿಸಿ ಪರಿಹಾರ ಕಾಮಗಾರಿಯನ್ನು ಆರಂಭಿಸದ ಸರ್ಕಾರಕ್ಕೆ ಛೀಮಾರಿ ಹಾಕಿದ ಅವರು, ಇದುವರೆಗಿನ ಚಳುವಳಿಯಲ್ಲಿ ಕೋಲಾರದ 8 ಸಾವಿರ ಜನ ಬಂಧಿತರಾಗಿದ್ದಾರೆ... ಸರ್ಕಾರಿ ಕಚೇರಿಗಳ ಪಿಕೆಟಿಂಗ್ ಕಾರ್ಯಕ್ರಮವನ್ನು ಮುಂದುವರಿಸುವುದಾಗಿ ಹೇಳಿದರು. ಜಿಲ್ಲೆಯ 2888 ಹಳ್ಳಿಗಳ ದನಕರುಗಳು ನಗರಗಳಲ್ಲಿನ ಕಸಾಯಿ ಅಂಗಡಿಗಳನ್ನು ಸೇರುತ್ತಿವೆ ಎಂದ ಲಕ್ಷ್ಮಣರೆಡ್ಡಿಯವರು ಮುಂದಿನ ಮೂರು ತಿಂಗಳ ನಂತರ ಇಡೀ ಜಿಲ್ಲೆಯಲ್ಲಿ ದನಕರುಗಳೇ ಇಲ್ಲದಂತಾಗಬಹುದು ಎಂಬ ಭೀತಿ ವ್ಯಕ್ತಪಡಿಸಿದರು.

ಕಾಲರ ಮಾದರಿಯಲ್ಲಿ ಭ್ರಷ್ಟಾಚಾರ

ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರವು ಕಾಲರ ರೋಗದ ಮಾದರಿಯಲ್ಲಿ ಹರಡಿದೆ ಎಂದು ಹೇಳಿದ ಬಿಜಾಪುರ ರೈತಸಂಘದ ಅಧ್ಯಕ್ಷ ಕಾಂ. ಭೀಮಶಿ ಕಲಾದಗಿಯವರು, ಭ್ರಷ್ಟಾಚಾರಿ ಕಾಂಗ್ರೆ ಮಂತ್ರಿಗಳಿಂದ ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರ ತಡೆಯಲು ಸಾಧ್ಯವಿಲ್ಲದ್ದರಿಂದ ಜನರೇ ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು.

ಜನರನ್ನು ಎದುರಿಸಲು ತಾಕತ್ತಿಲ್ಲದ ಮಂತ್ರಿಗಳು ಮಾತ್ರ ಜನರಿಂದ ಪರಾರಿಯಾಗುತ್ತಾರೆ ಎಂದು ಹೇಳಿದ ಕಲಾದಗಿ ಅವರು 'ಜನರಿಂದ ಅದೆಷ್ಟು ದಿನ ಪರಾರಿಯಾಗುತ್ತೀರಿ' ನೋಡೋಣ ಎಂದು ಸವಾಲು ಹಾಕಿದರು.

ಬರಗಾಲದ ಜಿಲ್ಲೆಗೆ ಬರಲಿಲ್ಲ ಸಿನಿಮಾಕ್ಕೆ ಹೋದರು

ಬರಗಾಲ ಪೀಡಿತ ಕೋಲಾರ ಜಿಲ್ಲೆಗೆ ಬರಲು ನಮ್ಮ ಮುಖ್ಯಮಂತ್ರಿಗಳಿಗೆ ಸಮಯವಿಲ್ಲ. 'ಅಬ್ದುಲ್ಲ', 'ಖುರ್‌ಬಾನಿ' ಸಿನಿಮಾಗಳನ್ನು ನೋಡಲು ಅವರಿಗೆ ಸಾಕಷ್ಟು ಸಮಯವಿದೆ. ಈ ವ್ಯಂಗ್ಯದ ಮಾತುಗಳನ್ನಾಡಿದವರು ಕೋಲಾರ ಜಿಲ್ಲೆಯ ರೈತಮುಖಂಡ ಹಾಗೂ ಪ್ರಸಿದ್ಧ ವಕೀಲ ವೆಂಕಟರಾಮಯ್ಯ ಅವರು. ಕೋಲಾರ ಜಿಲ್ಲೆಯಲ್ಲಿ ಚಳುವಳಿ ನಡೆದು 8-10 ಸಾವಿರ ರೈತರು ಜೈಲಿಗೆ ಹೋದರೂ ಜಿಲ್ಲೆಯ ಕಷ್ಟವನ್ನು ಅರಿತುಕೊಳ್ಳದ ಮುಖ್ಯಮಂತ್ರಿಗಳ ಮೇಲೆ ವೆಂಕಟರಾಮಯ್ಯ ಅವರಿಗೆ ಅಪಾರವಾದ ಸಿಟ್ಟು. ನಮ್ಮ ಜಿಲ್ಲೆಯ ಜನರೆಲ್ಲ 2ರೂ ದಿನಗೂಲಿಗೆ ನಗರಗಳ ಕಡೆ ವಲಸೆ ಹೋಗುತ್ತಿದ್ದಾರೆ ಎಂದರು ಅವರು. ಬರಗಾಲ ಪರಿಹಾರ ಕಾಮಗಾರಿಯನ್ನು ತಕ್ಷಣ ಆರಂಭಿಸಿ ಎಂದು ವೆಂಕಟರಾಮಯ್ಯ ಒತ್ತಾಯಿಸಿದರು. ಇಲ್ಲದಿದ್ದರೆ ಮಹಾರಾಷ್ಟ್ರದ ನಾಸಿಕ್ ಮಾದರಿ ಚಳುವಳಿಯನ್ನು ಹೂಡಬೇಕಾದೀತು ಎಂದೂ ಅವರು ಎಚ್ಚರಿಸಿದರು.

ನೀರು ಸರಬರಾಜು ಮಾಡದೆ ನೀರು ಗಂದಾಯವನ್ನು 11 ವರ್ಷಗಳ ಹಳೇ ಬಾಕಿ ಸಮೇತ ಕೇಳಿದರೆ ಯಾರಪ್ಪನ ಮನೆಗಂಟು ಕೊಡೋದ್ಕೆ ಎಂಬ ಸಿಟ್ಟಿನಿಂದ ಕೇಳಿದ ಅವರು ರೈತರ ಎಲ್ಲಾ ಬಾಕಿ ಮತ್ತು ಸಾಲಗಳನ್ನು ರದ್ದು ಮಾಡಿ ಎಂದರು. ಮೃಗಗಳ ಬಾಳುವೆ ನಡೆಸುತ್ತಿರುವ ರೈತರು ತಮ್ಮ ಪರಿಸ್ಥಿತಿ ಸುಧಾರಿಸಿಕೊಳ್ಳಲು ಒಂದಾಗಿ ಹೋರಾಡುವುದೊಂದೇ ದಾರಿ ಎಂದರು.

○

'ಸಾವಿರ ಸಾಲಗಳಿಂದ ರೈತನನ್ನು ಮುಕ್ತಿಗೊಳಿಸಿ'

"ಬೆಳೆಸಾಲ, ಬಾವಿಸಾಲ, ಸೊಸೈಟಿ ಸಾಲ, ಎಮ್ಮೆ ಸಾಲ... ಮುಂತಾದ ನೂರೆಂಟು ಸಾಲಗಳಿಂದ ಬಾಪ್ತದ ರೈತನನ್ನು ಮುಕ್ತಗೊಳಿಸಿ".

ಇದು ಪ್ರಾಂತರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಅವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಮಾಡಿದ ಕಳಕಳಿಯ ಮನವಿ.

ಪ್ರಾಂತ ರೈತಸಂಘವು ಬೆಂಗಳೂರಿನಲ್ಲಿ ವ್ಯವಸ್ಥೆ ಮಾಡಿದ್ದ ಸಾರ್ವಜನಿಕ ಸಭೆಯಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಕಾಂ. ಪಿ. ಆರ್. ಅವರು, ವರ್ಷಪೂರ್ತಿ ದುಡಿಮೆಯಲ್ಲೇ ಇರುವ ರೈತನಿಗೆ ಇಷ್ಟೊಂದು ಸಾಲಗಳು ಹೇಗೆ ಎಂದು ಪ್ರಶ್ನಿಸಿದರು. ಇಡೀ ದೇಶದ ರೈತರ ಮೇಲೆ ಆರುಸಾವಿರ ಕೋಟಿ ರೂಗಳಷ್ಟು ಸಾಲವಿದೆ ಎಂದು ಹೇಳಿದ ಅವರು ಇದರ ವಜಾ ಆಗಬೇಕು ಮತ್ತು ರಿಯಾಯಿತಿ ಬಡ್ಡಿ ದರದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ರೈತರಿಗೆ ಹೊಸ ಸಾಲ ಸಿಕ್ಕಬೇಕು ಎಂದರು. ಹೀಗಾಗದಿದ್ದರೆ ಬಗ್ಗಿ ಹೋಗಿರುವ ರೈತನ ಬೆನ್ನೆಲುಬು ಮುರಿದು ಹೋಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದರು.

ಆರು ಪಂಚವಾರ್ಷಿಕ ಯೋಜನೆಗಳು ಕಳೆದರೂ, ಆರು ಸಾರ್ವತ್ರಿಕ ಚುನಾವಣೆಗಳು ಜರುಗಿದ ನಂತರವೂ ರೈತನ ಪರಿಸ್ಥಿತಿ ಕೊಂಚವೂ ಸುಧಾರಿಸದೆ ತೀವ್ರ ಹದಗೆಡುತ್ತಿರುವುದನ್ನು ನೋಡಿದರೆ ಇದುವರೆಗಿನ ಪಂಚವಾರ್ಷಿಕ ಯೋಜನೆಗಳು ಮತ್ತು ಅವನ್ನು ರೂಪಿಸಿದ ಸರ್ಕಾರಗಳು ರೈತ ವಿರೋಧಿ ಎಂಬುದನ್ನು ಸ್ಪಷ್ಟಪಡಿಸುತ್ತವೆ ಎಂಬ ಅಂಶವನ್ನು ಎತ್ತಿ ತೋರಿಸಿದರು ಕಾಂ. ರಾಮಚಂದ್ರರಾವ್.

ದೇಶದ ಬಂಡವಾಳಗಾರರು ಮತ್ತು ಅವರ ಪಕ್ಷ ಮಾಡುವ ಈ ಯೋಜನೆಗಳ ವಿರುದ್ಧ ಇಂದು ರೈತ ತಿರುಗಿ ಬಿದ್ದಿದ್ದಾನೆ, ಬೀದಿಗಿಳಿದಿದ್ದಾನೆ, ರೈಲು ತಡೆಯುತ್ತಿದ್ದಾನೆ, ಸರ್ಕಾರ ನಡೆಯದಂತೆ ಮಾಡುತ್ತಿದ್ದಾನೆ; ಇದರಲ್ಲಿ ತಪ್ಪೇನೂ ಇಲ್ಲ ಎಂದು ಹೇಳಿ ರಾಜ್ಯಾದ್ಯಂತ ಮತ್ತು ರಾಷ್ಟ್ರದ ಹಲವಾರು ರಾಜ್ಯಗಳಲ್ಲಿ ನಡೆಯುತ್ತಿರುವ ರೈತ ಚಳುವಳಿಯನ್ನು ಸಮರ್ಥಿಸಿದರು.

ಸಿರಿವಂತರ ಪರ-ಬಡವರ ವಿರೋಧಿ

ರಾಜ್ಯದ ಕಾಫಿ ಮತ್ತು ಟೀ ಎಸ್ಟೇಟ್‌ಗಳ ಮಾಲೀಕರ ಸ್ವತ್ತುಗಳ ಮೇಲಿನ ಶೇ. 10 ರಷ್ಟು ಸರ್‌ಚಾರ್ಜನ್ನು ವಜಾ ಮಾಡಿ, ಈ ಮಾಲೀಕರು ಅತಿಕ್ರಮಿಸಿಕೊಂಡಿರುವ ಲಕ್ಷಾಂತರ ಎಕರೆ ಸರ್ಕಾರಿ ಭೂಮಿಯನ್ನು ಅವರಿಗೆ ಮಾಡಿಕೊಡುವುದಾಗಿ ಹೇಳಿರುವ ರಾಜ್ಯ ಸರ್ಕಾರವು ಸಿರಿವಂತರ ಪರವಾಗಿದ್ದು ಭೂಮಿಯ ಹಸಿವು ಇರುವ ಗೇಣಿದಾರರಿಗೆ ಮತ್ತು ಭೂರಹಿತರಿಗೆ ಏನೇನೂ ಸಹಾಯ ಮಾಡುತ್ತಿಲ್ಲ ಎಂದು ರಾಮಚಂದ್ರರಾವ್ ಟೀಕಿಸಿದರು. ವಿಧವೆಯರು, ಸಣ್ಣ ಹಿಡುವಳಿದಾರರು ಮತ್ತು ಅಂಗವಿಕಲರು ಭೂಸುಧಾರಣೆ ಕಾನೂನಿಂದ ಜಮೀನು ಕಳೆದುಕೊಂಡರೆ ಅವರಿಗೆ ಏಕಗಂಟಿನಲ್ಲಿ ಸರ್ಕಾರವೇ ಪರಿಹಾರ ಕೊಡಬೇಕು ಮತ್ತು ಇದಕ್ಕೆ ಭೂಸುಧಾರಣೆ ಶಾಸನದಲ್ಲಿ ತಿದ್ದುಪಡಿ ಆಗಬೇಕು ಎಂದು ಅವರು ಒತ್ತಾಯಿಸಿದರು.

ಸಾಮಾಜಿಕ ಬಹಿಷ್ಕಾರ

ರಾಜ್ಯದ ಹಲವಾರು ಹಳ್ಳಿಗಳಲ್ಲಿ ದಲಿತರ ಮೇಲೆ ಸವರ್ಣೀಯರು ಸಾಮಾಜಿಕ ಬಹಿಷ್ಕಾರ ಹಾಕುತ್ತಿದ್ದು ಇದನ್ನು ತಡೆಯಲು ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದೂ ರೈತಸಂಘದ ಕಾರ್ಯದರ್ಶಿಗಳು ಒತ್ತಾಯಿಸಿದರು.

ಕೇರಳ ಮತ್ತು ಪ. ಬಂಗಾಳ ರಾಜ್ಯದ ಸರ್ಕಾರಗಳೇ ರೈತಪಡೆದ ಸಾಲಕ್ಕೆ ಬಡ್ಡಿ ಕೊಡುತ್ತಿದ್ದು ಇಲ್ಲಿಯೂ ಅಂತಹ ವ್ಯವಸ್ಥೆ ಆಗಬೇಕೆಂದು ಅಭಿಪ್ರಾಯಪಟ್ಟ ರಾಮಚಂದ್ರರಾವ್ ಅವರು, ಅದಕ್ಕೆ ರೈತ ಕಾರ್ಮಿಕರ ಸರ್ಕಾರದ ಅವಶ್ಯಕತೆ ಇದ್ದು ಅಂತಹ ಸರ್ಕಾರ ತರುವಲ್ಲಿ ಇಂದಿನ ಮಾದರಿ (ರ್‍ಯಾಲಿ) ರೈತ ಕಾರ್ಮಿಕರ ಸಹಕಾರ ಮುಂದುವರಿದು ರಾಜ್ಯಕ್ಕೆ ಮಾರ್ಗದರ್ಶನವಾಗಲಿ ಎಂದು ಹಾರೈಸಿದರು.

ವಿಧಾನಸೌಧಕ್ಕೆ ದಿಗ್ಬಂಧನ

ರಾಜ್ಯದ ರೈತರ ಬೇಡಿಕೆಗಳನ್ನು ಈಡೇರಿಸದಿದ್ದರೆ ಇಡೀ ರಾಜ್ಯದ ರೈತರು ಮತ್ತು ಕಾರ್ಮಿಕರು ಒಂದಾಗಿ ಬಂದು ವಿಧಾನಸೌಧಕ್ಕೆ ದಿಗ್ಬಂಧನ ಹಾಕಬೇಕಾದೀತು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರು ಈ ಸಂದರ್ಭದಲ್ಲಿ ಮಾತನಾಡಿ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟರು.

(7ನೇ ಪುಟ ನೋಡಿ)

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ನಡೆದು ಬಂದ ದಾರಿ

(5ನೇ ಪುಟದಿಂದ)

ಎಫ್.ಐ. ಉನ್ನತ ಸ್ಥಾನಗಳನ್ನು ಗಳಿಸಿದೆ. ದೇಶದ ವಿದ್ಯಾರ್ಥಿ ಸಮುದಾಯದ ಸಮಸ್ಯೆಗಳನ್ನು ಪಾರ್ಲಿಮೆಂಟಿನ ಮುಂದಿಡಲು, ವಿದ್ಯಾರ್ಥಿ ಹೋರಾಟದ ಕೂಗನ್ನು ಪ್ರತಿಧ್ವನಿಸಲು 1980ರ ಚುನಾವಣೆಯಲ್ಲಿ ಇಬ್ಬರು ಎಸ್.ಎಫ್.ಐ. ಮುಖಂಡರು ಪಾರ್ಲಿಮೆಂಟ್ ಸದಸ್ಯರಾಗಿ ಜನತೆಯಿಂದ ಆರಿಸಿ ಬಂದಿದ್ದಾರೆ. ಪ್ರತಿಗಾಮಿ, ಪರಿಷ್ಕರಣವಾದೀ ಧೋರಣೆಗಳನ್ನು ಎದುರಿಸಿ ಬೆಳೆಯುತ್ತಿರುವ ಎಸ್.ಎಫ್.ಐ. ರಾಷ್ಟ್ರದ ಏಕೈಕ ಸಮರಶೀಲ ವಿದ್ಯಾರ್ಥಿ ಸಂಘಟನೆಯಾಗಿದ್ದು ವಿದ್ಯಾರ್ಥಿ ಚಳುವಳಿಯ ಕೇಂದ್ರ ಬಿಂದುವಾಗಿದೆ. ವಿದ್ಯಾರ್ಥಿಗಳನ್ನು ಅನ್ಯಾಯ ಶೋಷಣೆಯ ವಿರುದ್ಧದ ಹೋರಾಟದಿಂದ ವಿಮುಖಗೊಳಿಸುವ ಕುತಂತ್ರವನ್ನು ಸೋಲಿಸಿ 'ಅಭ್ಯಾಸ ಮತ್ತು ಹೋರಾಟ'ಎಂಬ ಸೂತ್ರದ ಮೂಲಕ ದೇಶದ ವಿದ್ಯಾರ್ಥಿ ಸಮುದಾಯವನ್ನು ತನ್ನೆಡೆಗೆ ಆಕರ್ಷಿಸಿದೆ. ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿ ವಿರೋಧಿ ವಿದ್ಯಾರ್ಥಿ ಚಳುವಳಿಯು ಹೆಚ್ಚುತ್ತಿದ್ದ ಸಂದರ್ಭದಲ್ಲಿ ಉದಯಿಸಿದ ಎಸ್.ಎಫ್.ಐ. ತನ್ನ ಸ್ಪಷ್ಟವಾದ ಸಾಮ್ರಾಜ್ಯಶಾಹಿ ವಿರೋಧಿ ಧೋರಣೆಯಿಂದಾಗಿ ಇಂದು ಅಂತರಾಷ್ಟ್ರೀಯವಾಗಿಯೂ ಉನ್ನತ ಸ್ಥಾನಮಾನಗಳನ್ನು ಪಡೆಯಲಾರಂಭಿಸಿದೆ. ವಿಯಟ್ನಾಂ, ಕೊರಿಯಾ, ಇರಾನ್, ಜಿಂಬಾಬ್ವೆ ಮುಂತಾದ ದೇಶಗಳ ವಿದ್ಯಾರ್ಥಿ ಸಂಘಟನೆಗಳೊಡನೆ ಸೌಹಾರ್ದ ಸಂಬಂಧ ಹೊಂದಿದೆ. 1978ರಲ್ಲಿ ಕ್ಯೂಬಾದಲ್ಲಿ ನಡೆದ ವಿಶ್ವಯುವಜನ ಮೇಳದಲ್ಲಿ ಎಸ್.ಎಫ್.ಐ. ಸಹ ಪ್ರಾತಿನಿಧ್ಯ ಪಡೆಯಿತು. 1980ರಲ್ಲಿ ಮಾಸ್ಕೋದಲ್ಲಿ ನಡೆದ ವಿದ್ಯಾರ್ಥಿ ಯುವಜನ ಸಂಘಟನೆಗಳ ಸಮಾವೇಶದಲ್ಲೂ, ಒಲಿಂಪಿಕ್ಸ್‌ನಲ್ಲೂ ಎಸ್.ಎಫ್.ಐ. ಮುಖಂಡರು ಅತಿಥಿಗಳಾಗಿ ಭಾಗವಹಿಸಿದ್ದರು. ಇತ್ತೀಚೆಗೆ ಆಲ್ ಚೈನಾ ಸ್ಟೂಡೆಂಟ್ಸ್ ಫೆಡರೇಷನ್ ಸಂಘಟನೆಯು ಎಸ್.ಎಫ್.ಐ ನೊಡನೆ ಸ್ನೇಹವನ್ನು ಬಯಸಿ ಪತ್ರ ಕಳುಹಿಸಿದೆ.

ಎಸ್, ಎಫ್. ಐ. ನ ಈ ಸಾಧನೆ ಬೆಳವಣಿಗೆಯನ್ನು ಗಮನಿಸುವಾಗ ಇದಕ್ಕಾಗಿ ನಮ್ಮ ಸಂಗಾತಿಗಳು ಮಾಡಿದ ಅಸಾಧಾರಣ ತ್ಯಾಗ, ಬಲಿದಾನಗಳನ್ನು ಎಂದೆಂದಿಗೂ ಮರೆಯುವಂತಿಲ್ಲ. ಈ ಸಾಧನೆಗಳಿಗಾಗಿ ನೂರಾರು ಸಂಗಾತಿಗಳು ತಮ್ಮ ಅಮೂಲ್ಯ ಪ್ರಾಣವನ್ನೇ ಅರ್ಪಿಸಿದ್ದಾರೆ. ಸಾವಿರಾರು ಸಂಗಾತಿಗಳು ಪೋಲೀಸರು ಮತ್ತು ಗೂಂಡಾಗಳಿಂದ ಹಿಂಸೆ, ಶಿಕ್ಷೆಗೊಳಗಾಗಿದ್ದಾರೆ. ಅನೇಕರು ಶಾಲಾ-ಕಾಲೇಜುಗಳಿಂದ ವಜಾ ಮಾಡಲ್ಪಟ್ಟಿದ್ದಾರೆ. 1972ರಲ್ಲಿ ಪ. ಬಂಗಾಳ ಒಂದರಲ್ಲಿಯೇ 114 ಸಂಗಾತಿಗಳು ಕೊಲ್ಲಲ್ಪಟ್ಟಿದ್ದಾರೆ. ತುರ್ತುಸ್ಥಿತಿ ಸಮಯದಲ್ಲಿ ಪಂಜಾಬಿನ ಕಾಂ. ಬಿರಜಿತ್ ಕೌರ್, ಕೇರಳದ ಕಾಂ. ಮುಹಮ್ಮದ್ ಉಸ್ತಾಫಾ ಮುಂತಾದ ಅನೇಕರು ಬಲಿಯಾದರು, 60 ಮಂದಿ ಮುಖಂಡರು ಕಾರಾಗೃಹ ಶಿಕ್ಷೆ ಅನುಭವಿಸಿದರು. 1980ರ ಅಕ್ಟೋಬರ್‌ನಲ್ಲಿ ಪಂಜಾಬಿನ ಕಾಂ. ರೂರ್ ಸಿಂಗ್ ಕಾಂಗ್ರೆಸ್-ನಕ್ಸಲೈಟ್ ಗೂಂಡಾಗಳಿಂದ ಕೊಲೆಯಾದರು. ಅಸ್ಸಾಂನಲ್ಲಿ ಪ್ರತ್ಯೇಕತಾವಾದಿ ಚಳುವಳಿಗಾರರ ಹಲ್ಲೆಗೆ ತುತ್ತಾಗಿ ಕಾಂ. ಮದನ್ ದೇಕಾ ಮತ್ತು ಕಾಂ. ಜನಮೇಜಯ ನಾಥ್ ಹತರಾದರು. ಹತ್ತನೇ ವಾರ್ಷಿಕೋತ್ಸವದ ಈ ಸಂದರ್ಭದಲ್ಲಿ ಇವರೆಲ್ಲರ ತ್ಯಾಗ, ಬಲಿದಾನಗಳಿಗೆ ಗೌರವ ಸಲ್ಲಿಸುವುದರೊಂದಿಗೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಸಾಧನೆಗಾಗಿ ಇವರು ನಡೆಸಿದ ಹೋರಾಟವನ್ನು ಗುರಿ ಮುಟ್ಟಿಸಲು ಶ್ರಮಿಸುತ್ತೇವೆಂದು ಪ್ರತಿಜ್ಞೆ ಸ್ವೀಕರಿಸಬೇಕಾಗಿದೆ. ದೇಶದ ಅಸಂಖ್ಯಾತ ಅಸಂಘಟಿತ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಸಂಘಟಿಸುವುದರೊಂದಿಗೆ ಪ್ರತಿಗಾಮಿ, ಪರಿಷ್ಕರಣವಾದಿಗಳ ಹಿಡಿತದಲ್ಲಿರುವ ವಿದ್ಯಾರ್ಥಿಗಳನ್ನು ಎಸ್. ಎಫ್. ಐ. ಬಾವುಟದಡಿಯಲ್ಲಿ ಅಣಿಗೊಳಿಸಬೇಕಾಗಿದೆ.

●

'ಸಾವಿರ ಸಾಲಗಳಿಂದ ರೈತನನ್ನು ಮುಕ್ತಿಗೊಳಿಸಿ'

(6ನೇ ಪುಟದಿಂದ)

ನರಗುಂದ ನವಲಗುಂದದಲ್ಲಿ ಪ್ರಾರಂಭವಾದ ರೈತಚಳುವಳಿಯು ಎಲ್ಲರ ನಿರೀಕ್ಷೆ ಮೀರಿ ಇಡೀ ರಾಷ್ಟ್ರಕ್ಕೆ ಹರಡುತ್ತಿರುವುದು ರೈತರಿಗಿರುವ ಕಷ್ಟವನ್ನು ತೋರಿಸುತ್ತದೆ ಎಂದು ನುಡಿದರು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೈತಚಳುವಳಿ ನಡೆಯುತ್ತಿದ್ದರೂ ರಾಜ್ಯದ ಒಬ್ಬ ಸಂಸತ್ ಸದಸ್ಯನಾಗಲೀ, ವಿಧಾನಸಭಾ ಸದಸ್ಯನಾಗಲೀ ರೈತರನ್ನು ಮಾತನಾಡಿಸುವ ಸೌಜನ್ಯ ತೋರಿಸಿಲ್ಲ ಎಂದು ವಿಷಾದಿಸಿದ ಭಟ್ ಅವರು ರಾಜಕೀಯದಲ್ಲಿ ನೈತಿಕತೆಯ ಅಭಾವ ಎದ್ದುಕಾಣುತ್ತಿದೆ ಎಂದರು.

ದೇಶದಲ್ಲಿ ಸಂಪತ್ತು ಹೆಚ್ಚುತ್ತಿದ್ದರೂ ಅದು ಟಾಟಾ, ಬಿರ್ಲಾಗಳಂತಹ ಸಿರಿವಂತರ ಮನೆಗೆ ಹೋಗುತ್ತಿದೆ ಎಂಬುದನ್ನು ಸರ್ಕಾರವೇ ತನ್ನ ಅಂಕಿ ಅಂಶಗಳಲ್ಲಿ ಒಪ್ಪಿಕೊಂಡರೂ ತಾನು ಮಾತ್ರ ಬಡವರ ಸರ್ಕಾರ ಎಂದು ಹೇಳಿಕೊಳ್ಳುತ್ತಿದೆ ಎಂದು ಅಣಕವಾಡಿದರು ಕಾಂ. ಎಂ. ಕೆ.

ಜನಸಾಮಾನ್ಯರನ್ನು ದೋಚಿ ಬಂಡವಾಳಗಾರರು ಮತ್ತು ಜಮೀನ್ದಾರರನ್ನು ಬೆಳೆಸುತ್ತಿರುವ ಈ ಆರ್ಥಿಕ ಸಾಮಾಜಿಕ ವ್ಯವಸ್ಥೆ ಬದಲಾಗದ ಹೊರತು ಏನೇನೂ ಪ್ರಯೋಜನವಿಲ್ಲ ಎಂದು ಭಟ್ ಹೇಳಿ ಇದಕ್ಕಾಗಿ ರೈತಕಾರ್ಮಿಕರು ಒಗ್ಗಟ್ಟಿನಿಂದ ದುಡಿಯಬೇಕೆಂದರು.

ಕರ್ನಾಟಕದ ದಾರಿದೀಪ

ರಾಜ್ಯ ಸಿ. ಐ ಟಿ. ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರು ಈ ಸಂದರ್ಭದಲ್ಲಿ ಮಾತನಾಡಿ ರಾಜ್ಯದ ರೈತ-ಕಾರ್ಮಿಕರು ಜೊತೆ ಜೊತೆಯಾಗಿ ನಡೆದಿರುವ ಈ ಸಂದರ್ಭವು ಅವರ ಐಕ್ಯತೆಯನ್ನು ಭದ್ರಗೊಳಿಸಿ ಕರ್ನಾಟಕಕ್ಕೆ ದಾರಿದೀಪವಾಗಲಿ ಎಂದು ಹಾರೈಸಿದರು.

ನಿಂತ ನಿಲುವಿನಲ್ಲಿ ಚೌಡಯ್ಯಸ್ಮಾರಕ ಕಟ್ಟಡಕ್ಕೆ 20ಲಕ್ಷರೂ ದಾನ ಮಾಡಿಬಿಡುವ ಗುಂಡೂರಾಯರು ರೈತರ ಬೇಡಿಕೆಗಳಿಗೂ ಅದೇಕೆ ಕಿವಿಗೊಡಬಾರದು ಎಂದು ಪ್ರಶ್ನಿಸಿದ ಕಾಂ. ರಾವ್ ಅವರು ರೈತ ಇದ್ದರೇ ಕೈಗಾರಿಕಾ ವಸ್ತುಗಳಿಗೂ ಮಾರುಕಟ್ಟೆ ಎಂಬುದನ್ನು ಮರೆಯಬಾರದು ಎಂದು ಗುಂಡೂರಾವ್‌ಗೆ ತಿಳುವಳಿಕೆ ನೀಡಿದರು.

ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ ಮುಗುವಾಳಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರೈತಸಂಘದ ಖಜಾಂಚಿ ಕಾಂ. ಪಿ ಜಗನ್ನಾಥ್ ಸ್ವಾಗತಿಸಿದರು.

"ಹೋರಾಟ-ಹೋರಾಟ. ಗೆಲ್ಲೋವರೆಗೆ ಹೋರಾಟ" ಎಂಬ ಘೋಷಣೆಯೊಂದಿಗೆ ಸಭೆ ಮುಕ್ತಾಯವಾಯಿತು.

●

ಕಾರ್ಯಕಾರೀ ಸಮಿತಿ ಸಭೆ

ಚಿಕ್ಕಮಗಳೂರು-ಹಾಸನ ಸಾಮಿಲ್ಸ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್‌ನ ಕಾರ್ಯಕಾರೀ ಸಮಿತಿಯ ಸಭೆಯು ದಿನಾಂಕ 30-11-80 ರಂದು ಕಾಂ. ಸುಕುಮಾರ್‌ರ ಅಧ್ಯಕ್ಷತೆಯಲ್ಲಿ ಜರುಗಿತು. ಇತ್ತೀಚೆಗೆ ನಿಧನರಾದ ಕಾಂ. ದಿನೇನ್‌ಭಟ್ಟಾಚಾರ್ಯ, ಕಾಂ. ಎ.ವಿ. ಕುಂಜ್ಞಂಬು ಮತ್ತು ಎ.ಕೆ. ನಾರಾಯಣರವರಿಗೆ ಸಭೆ ಶ್ರದ್ಧಾಂಜಲಿಯನ್ನರ್ಪಿಸಿತು. ಕಾರ್ಯದರ್ಶಿ ಮಂಡಿಸಿದ ವರದಿಯ ಮೇಲೆ ನಡೆದ ಚರ್ಚೆಯ ನಂತರ ಕೆಳಕಂಡ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.

ಕೇಂದ್ರ ಸರಕಾರವು ಜಾರಿಗೆ ತಂದಿರುವ ರಾಷ್ಟ್ರೀಯ ಭದ್ರತಾ ಶಾಸನವನ್ನು ಈ ಕೂಡಲೇ ಹಿಂತೆಗೆಯಬೇಕೆಂದು ಒತ್ತಾಯಿಸಲಾಯಿತು.

ಸ್ಥಳೀಯ ಕಾಫೀ ಕ್ಯೂರಿಂಗ್ ಸಂಸ್ಥೆಗಳ ಕೆಲವು ಆಡಳಿತ ಮಂಡಳಿಗಳು ಸಂಘದ ಸದಸ್ಯರಾಗಿ ಸೇರಿರುವ ಕಾರ್ಮಿಕರಿಗೆ ವಿನಾಕಾರಣ ಕಿರುಕುಳ ಕೊಡುವುದನ್ನು ಖಂಡಿಸಲಾಯಿತು.

ಸ್ಥಳೀಯ ಕಾಫೀ ಕ್ಯೂರಿಂಗ್ ಆಡಳಿತ ಮಂಡಳಿಗಳಿಗೆ ಸೆಪ್ಟೆಂಬರ್ ತಿಂಗಳಲ್ಲೇ ಬೇಡಿಕೆಪತ್ರ ಸಲ್ಲಿಸಿದ್ದರೂ ಈವರೆಗೆ ಆಡಳಿತ ಮಂಡಳಿಗಳು ಗಮನಹರಿಸಿಲ್ಲವಾದ್ದರಿಂದ, ಈ ಬಗ್ಗೆ ಗಮನ ಕೊಡದಿದ್ದರೆ ಮುಷ್ಕರಕ್ಕೆ ಕರೆ ಕೊಡಬೇಕೆಂದೂ ತೀರ್ಮಾನಿಸಲಾಯಿತು.

ಸಭೆಯ ಕೊನೆಗೆ ಶ್ರೀ ಎಂ.ವಿ. ನಾಗರಾಜು ವಂದನಾರ್ಪಣೆ ಮಾಡಿದರು. ○

ಶಹಾಬಾದ್‌ನ ಎ.ವಿ.ಬಿ. ಕಾರ್ಖಾನೆಯಲ್ಲಿ ಸಿ.ಐ.ಟಿ.ಯು. ಯೂನಿಯನ್ ಸ್ಥಾಪನೆ

[4ನೇ ಪುಟದಿಂದ]

ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್ ಮತ್ತು ಗುಲ್ಬರ್ಗಾದ ಕಾಂ. ಹಸ್ಸನ್‌ಖಾನ್ ಮುಂತಾದವರು ಹಾಜರಿದ್ದರು.

ಕಾಂ. ಮಹಮ್ಮದ್ ಇಸ್ಮಾಯಿಲ್ ಅಧ್ಯಕ್ಷತೆ ವಹಿಸಿದ ಸಭೆಯಲ್ಲಿ ಹೊಸ ಸಂಘದ ಪದಾಧಿಕಾರಿಗಳ ಆಯ್ಕೆ ನಡೆಯಿತು. ಸಂಘದ ಅಧ್ಯಕ್ಷರಾಗಿ ಹಸನ್ ಖಾನ್, ಉಪಾಧ್ಯಕ್ಷರಲ್ಲಿ ಒಬ್ಬರಾಗಿ ಕಾಂ. ವಿ.ಜೆ.ಕೆ. ನಾಯರ್, ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಪುಷ್ಪರಾಜ್, ಕಾರ್ಯದರ್ಶಿಯಾಗಿ ಕಾಂ. ವಿ.ಎನ್. ಮೋಹನನ್ ಇವರುಗಳು ಸೇರಿ ಒಟ್ಟು 41ಜನರ ಕಾರ್ಯಕಾರೀ ಸಮಿತಿಯನ್ನು ಚುನಾಯಿಸಲಾಯಿತು. ಹೊಸ ಕಾರ್ಯಕಾರೀ ಸಮಿತಿ ಸಭೆ ಸೇರಿ ದುರ್ಗಾಪುರ ಮತ್ತು ಶಹಬಾದ್ ಯೂನಿಯನ್‌ಗಳ ಒಂದು ಸಮನ್ವಯ ಸಮಿತಿಯನ್ನು ರಚನೆ ಮಾಡಲಾಯಿತು. ಈ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ಕಾಂ. ಮಹಮ್ಮದ್ ಇಸ್ಮಾಯಿಲ್, ಕಾರ್ಯದರ್ಶಿಯಾಗಿ ಕಾಂ. ವಿ. ಚಕ್ರವರ್ತಿಯವರನ್ನು ಆಯ್ಕೆ ಮಾಡಲಾಗಿದೆ.

ವಿದೇಶ ಗುತ್ತೇದಾರಿ ಕಂಪೆನಿಗಳಲ್ಲಿ ಒಂದಾದ ಎ.ಸಿ.ಸಿ.ಯವರ ಒಡೆತನದಲ್ಲಿರುವ ಸುಮಾರು 7000 ಕಾರ್ಮಿಕರು ಸಮರಶೀಲ ಸಂಘಟನೆಯ ಆಶ್ರಯದಲ್ಲಿ ವಿದೇಶಿ ಬಂಡವಾಳಶಾಹಿಗಳು ನಮ್ಮ ದೇಶದಲ್ಲಿ ನಡೆಸುತ್ತಿರುವ ಶೋಷಣೆಗೆ ವಿರುದ್ಧವಾದ ಹೋರಾಟದ ಸಿದ್ಧತೆ ನಡೆಸಿರುವುದು ಸ್ವಾಗತಾರ್ಹ ಬೆಳವಣಿಗೆ. ○

ಬೆಲೆ ಏರಿಕೆ ವಿರುದ್ಧ ಹೋರಾಡಲು ಮಹಿಳೆಯರ ತೀರ್ಮಾನ

ಜನತೆಯನ್ನು ಅತ್ಯಂತ ಅಧಿಕವಾಗಿ ಬಾಧಿಸುತ್ತಲಿರುವ ಬೆಲೆ ಏರಿಕೆ ಸಮಸ್ಯೆಯ ವಿರುದ್ಧ 1981 ಜನವರಿ 6 ರಂದು ರಾಜ್ಯದಾದ್ಯಂತ ಪ್ರತಿಭಟಿಸಲು ಮಹಿಳಾ ಪ್ರತಿನಿಧಿಗಳ ಸಭೆಯು ತೀರ್ಮಾನಿಸಿದೆ. ಡಿಸೆಂಬರ್ 9ರಂದು ಧಾರವಾಡದಲ್ಲಿ ಸೇರಿದ್ದ ಬೇರೆ ಬೇರೆ ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಚರ್ಚಿಸಿ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಮತ್ತು ಇತರ ಮಹಿಳಾ ಸಂಘಟನೆಗಳನ್ನೂ ಸೇರಿಸಿಕೊಂಡು ಎಲ್ಲಾ ಕಡೆಗಳಲ್ಲೂ ಪ್ರತಿಭಟನಾ ಕಾರ್ಯಕ್ರಮ ನಡೆಸಲು ಕರೆ ಇತ್ತಿರುವರು.

ಮುಂದಿನ ವರ್ಷ ಫೆಬ್ರವರಿಯಲ್ಲಿ ವಿಶಾಲ ತಳಹದಿಯ, ಪ್ರಜಾಪ್ರಭುತ್ವ ಮತ್ತು ಪ್ರಗತಿಶೀಲ ವಿಚಾರಗಳ ತಳಹದಿಯಲ್ಲಿ ಅಖಿಲಭಾರತಮಟ್ಟ ಮಹಿಳೆಯರ ಸಂಘಟನೆಯು ಪ್ರಾರಂಭವಾಗುವುದನ್ನು ಸ್ವಾಗತಿಸಿದ ಸಭೆಯು ಮುಂದಿನ ಮಾರ್ಚಿ ಅಥವಾ ಏಪ್ರಿಲ್‌ನಲ್ಲಿ ರಾಜ್ಯಮಟ್ಟ ಮಹಿಳಾ ಸಮ್ಮೇಳನವನ್ನು ನಡೆಸಿ, ಅಖಿಲಭಾರತ ಮಟ್ಟದ ಸಂಘಟನೆಯ ಅಂಗವಾಗಿ ಕರ್ನಾಟಕದಲ್ಲೂ ಮಹಿಳಾ ಸಂಘಟನೆ ಸ್ಥಾಪಿಸಲು ನಿರ್ಣಯಿಸಲಾಯಿತು. ಈ ದಿಸೆಯಲ್ಲಿ ಕೆಲಸಮಾಡಲು ಮತ್ತು ಈಗಾಗಲೇ ಬೇರೆಬೇರೆಡೆಗಳಲ್ಲಿ ಪ್ರಾರಂಭವಾಗಿರುವ ಮಹಿಳಾ ಸಂಘಟನೆಗಳ ಕೆಲಸವನ್ನು ಸಮನ್ವಯಗೊಳಿಸಲು ಒಂದು ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಕಾಂ. ವಿಣಾ ಹಳಕಟ್ಟಿ ಮತ್ತು ಕಾಂ. ಲೀಲಾ ಅವರುಗಳನ್ನು ಸಹಸಂಚಾಲಕರುಗಳನ್ನಾಗಿ ನೇಮಕಮಾಡಲಾಯಿತು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಮತ್ತು ಇತರ ಮಹಿಳಾ ಸಂಘಟನೆಗಳೊಂದಿಗೆ ಸೇರಿ ಜನವರಿ 6ರ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಭೆಯು ಕರೆ ಇತ್ತಿದೆ. ಜನವರಿ 6ರ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯು ಮುತುವರ್ಜಿವಹಿಸಿ ಶ್ರಮಿಸುವುದು ಅವಶ್ಯವಿದೆ.

●

ಚಂದಾ ವಿವರ

1 ವರ್ಷಕ್ಕೆ	25ರೂ.
6 ತಿಂಗಳಿಗೆ	13ರೂ.
ಬಿಡಿ ಪ್ರತಿ	50 ಪೈಸೆ

ರೈತರ ಬೇಡಿಕೆ ಬೆಂಬಲಾರ್ಥ ನಗರದಲ್ಲಿ ಭಾರಿ ಮೆರವಣಿಗೆ

(1ನೇ ಪುಟದಿಂದ)

ಡೋಲು, ತಮಟೆ, ವಾಲಗ ಮುಂತಾದ ಗ್ರಾಮೀಣ ವಾದ್ಯಗಳ ನಾದಕ್ಕೆ ನಗರದ ಕಾರ್ಮಿಕರೂ ನರ್ತಿಸುತ್ತಿದ್ದರು.

ಡಂ..ಡಮಾರ್... ಮೆರವಣಿಗೆಯ ಮುಂಭಾಗದಲ್ಲಿ ಉತ್ಸಾಹಿ ಕಾರ್ಯಕರ್ತರು ಸಿಡಿಸುತ್ತಿದ್ದ ಪಟಾಕಿಗಳು ಮಕ್ಕಳಿಗೆ ಆನಂದ ಕೊಡುತ್ತಿದ್ದವು.

ಎಡಪಂಥೀಯ ಸಂಘ ಸಂಸ್ಥೆಗಳ ಇದುವರೆಗಿನ ಇತಿಹಾಸದಲ್ಲಿ ಅತ್ಯಂತ ದೊಡ್ಡ ಪ್ರದರ್ಶನವಾದ ಡಿ. 12 ರ ರೈತ-ಕಾರ್ಮಿಕರ ಮೆರವಣಿಗೆಯು ಕೆ. ಆರ್. ಸರ್ಕಲ್ ಬಳಿ ಒಂದು ಪಾಯಿಂಟ್ ದಾಟಲು 55 ನಿಮಿಷಗಳನ್ನು ತೆಗೆದುಕೊಂಡಿತು.

ಪ್ರಾಂತ ರೈತಸಂಘದ ಅಧ್ಯಕ್ಷ ಕಾಂ. ಎಚ್. ಮುಗುವಾಳಪ್ಪ, ಪ್ರಧಾನ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್, ಬಿಜಾಪುರ ಜಿಲ್ಲೆಯ ರೈತ ಮುಖಂಡ ಭೀಮಸಿ ಕಲಾದಗಿ, ಮಲಪ್ರಭಾ ರೈತ ಚಳುವಳಿ ಸಮನ್ವಯ ಸಮಿತಿ ಸದಸ್ಯ ಎ.ಎನ್. ಹಳಕಟ್ಟಿ, ಕೋಲಾರ ಜಿಲ್ಲೆ ರೈತ ಮುಖಂಡರಾದ ಆರ್. ವೆಂಕಟರಾಮಯ್ಯ ಮತ್ತು ಎ.ವಿ. ಅಪ್ಪಸ್ವಾಮಿ ರೆಡ್ಡಿ ಹಾಗೂ ಶಿವಮೊಗ್ಗ ಜಿಲ್ಲೆ ರೈತ ಮುಖಂಡ ಕೆ.ಎಂ. ಶ್ರೀನಿವಾಸ್ ಅವರನ್ನೊಳಗೊಂಡ ರೈತರ ನಿಯೋಗವು ವಿಧಾನಸೌಧಕ್ಕೆ ತೆರಳಿ ಮುಖ್ಯಮಂತ್ರಿಗಳ ಗೈರು ಹಾಜರಿ ಪ್ರಯುಕ್ತ ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಪತ್ರ ಅರ್ಪಿಸಿದರು.

ವಿಧಾನಸೌಧದಿಂದ ಮೆರವಣಿಗೆಯು ಸಂಜೆ ನಾಲ್ಕುವರೆಗೆ ಮತ್ತೆ ಹೊರಟು ಮಹಾರಾಣಿ ಕಾಲೇಜ್, ಆನಂದರಾವ್ ಸರ್ಕಲ್ ಮಾರ್ಗವಾಗಿ ಬೆಂಗಳೂರು ಸಿಟಿ ರೈಲು ನಿಲ್ದಾಣದ ಮೂಲಕ ಹಾದು ಚಿಕ್ಕಲಾಲ್‌ಬಾಗ್ ನಲ್ಲಿ ವ್ಯವಸ್ಥೆ ಮಾಡಲಾಗಿದ್ದ ಸಾರ್ವಜನಿಕ ಸಭೆಯನ್ನು ಸೇರಿತು.

ಸಿ.ಐ.ಟಿ.ಯು. ನೇತೃತ್ವದ ಬೆಂಗಳೂರಿನ 53 ಸಂಘ ಸಂಸ್ಥೆಗಳು ಪ್ರದರ್ಶನದಲ್ಲಿ ಭಾಗವಹಿಸಿದ್ದು, ಕೆ.ಜಿ.ಎಫ್.ನ ಚಿನ್ನದ ಗಣಿ ಕಾರ್ಮಿಕರೂ ಆಗಮಿಸಿದ್ದರು. ಕೋಲಾರ, ತುಮಕೂರು, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ದ.ಕನ್ನಡ, ಕೊಡಗು, ಬೆಳಗಾಂ, ಮೈಸೂರು, ಧಾರವಾಡ, ಬಿಜಾಪುರ, ಬೆಂಗಳೂರು ಜಿಲ್ಲೆಗಳಿಂದ ರೈತಸಂಘದ ಸದಸ್ಯರು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು.

ಶಾಂತಿಯುತವಾಗಿ ಮತ್ತು ಶಿಸ್ತಿನಿಂದ ತಮ್ಮ ಬೇಡಿಕೆಗಳ ಬೆಂಬಲಾರ್ಥ ಮತಪ್ರದರ್ಶನ ನಡೆಸಿದ ಪ್ರಾಂತ ರೈತಸಂಘವು ಸಾರ್ವಜನಿಕರ ಮೆಚ್ಚುಗೆ ಗಳಿಸಿತು.

ಉದ್ಯೋಗಕ್ಕಾಗಿ ಹೋರಾಡಲು ಯುವಜನ ಸಂಘಟನೆಯ ಕರೆ

ನಗರ ಮತ್ತು ಗ್ರಾಮೀಣ ಪ್ರದೇಶ, ವಿದ್ಯಾವಂತ ಹಾಗೂ ಅವಿದ್ಯಾವಂತರೂ ಸೇರಿದಂತೆ ಎಲ್ಲಾ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿ ಕೊಡುವಂತೆ ಮತ್ತು ಉದ್ಯೋಗ ದೊರಕುವ ತನಕ ನಿರುದ್ಯೋಗ ಭತ್ಯೆಯನ್ನು ಕೊಡುವಂತೆಯೂ; ರಾಜ್ಯದ ಸ್ಟೈಫಂಡರೀ ಪದವೀಧರರ ವೇತನವನ್ನು ಹೆಚ್ಚಿಸಿ ಅವರ ಕೆಲಸವನ್ನು ಖಾಯಂಗೊಳಿಸುವಂತೆಯೂ; ಉದ್ಯೋಗ ವಿನಿಮಯ ಕಛೇರಿಗಳು ಮತ್ತಿತರ ಕಛೇರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ಕೊನೆಗೊಳಿಸುವಂತೆಯೂ ಸರಕಾರವನ್ನು ಒತ್ತಾಯಿಸಲು ರಾಜ್ಯದಾದ್ಯಂತ ಹೋರಾಟ ನಡೆಸಲು ರಾಜ್ಯದ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯು ಕರೆ ಇತ್ತಿದೆ. 1981 ಜನವರಿ 15ರಂದು ರಾಜ್ಯದ ಎಲ್ಲೆಡೆಗಳಲ್ಲೂ ಮೆರವಣಿಗೆ, ಸಭೆ ನಡೆಸುವುದು, ಜಿಲ್ಲಾಧಿಕಾರಿ ಅಥವಾ ಸಮೀಪದ ರೆವಿನ್ಯೂ ಅಧಿಕಾರಿಯ ಮೂಲಕ ಮನವಿ ಪತ್ರವನ್ನು ರಾಜ್ಯ ಸರಕಾರಕ್ಕೆ ಕಳುಹಿಸುವುದು. ಧರಣಿ ಸತ್ಯಾಗ್ರಹ ಮತ್ತು ಸಭೆಗಳನ್ನು ನಡೆಸುವುದಕ್ಕೆ ಡಿಸೆಂಬರ್ 12ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಡಿ.ವೈ.ಓ. ರಾಜ್ಯ ಸಂಘಟನಾ ಸಮಿತಿಯು ಕರೆ ಇತ್ತಿದೆ, ಜನವರಿ ಕೊನೆಗೆ ಬೆಂಗಳೂರಿನಲ್ಲಿ ವಿಧಾನಸೌಧ ಎದುರು ರಾಜ್ಯಮಟ್ಟದ ಬೃಹತ್ ಯುವಜನ ಪ್ರತಿಭಟನಾ ರ್‍ಯಾಲಿ ನಡೆಸಲೂ ರಾಜ್ಯ ಸಮಿತಿಯು ತೀರ್ಮಾನಿಸಿದೆ. ಈ ಹೋರಾಟವನ್ನು ಜಂಟಿಯಾಗಿ ನಡೆಸಲು ಪ್ರಯತ್ನಿಸಬೇಕೆಂದು ತೀರ್ಮಾನಿಸಿದ ರಾಜ್ಯಸಮಿತಿಯು ಇನ್ನಿತರ ಯುವಜನ ಸಂಘಟನೆಗಳಿಗೂ, ಸ್ಟೈಫಂಡರೀ ಪದವೀಧರರಿಗೂ ಜಂಟೀ ಹೋರಾಟದಲ್ಲಿ ಭಾಗವಹಿಸಲು ಕರೆ ಇತ್ತಿದೆ.

ಅಖಿಲಭಾರತ ಮಟ್ಟದಲ್ಲಿ ಡಿ.ವೈ.ಎಫ್.ಐ. ಸಂಘಟನೆಯು ಸ್ಥಾಪನೆಯಾದಿರುವ ಹಿನ್ನೆಲೆಯಲ್ಲಿ ರಾಜ್ಯದ ಘಟಕವನ್ನು ಇದರೊಂದಿಗೆ ವಿಲೀನಗೊಳಿಸುವುದೇ ಅಥವಾ ಒಕ್ಕೂಟಕ್ಕೆ ಸೇರಿಸಿಕೊಳ್ಳುವುದೇ ಎಂಬುದರ ಬಗ್ಗೆ ಚರ್ಚೆ ನಡೆದ ಬಳಿಕ, ಫೆಬ್ರವರಿ ಮೊದಲ ಭಾಗದಲ್ಲಿ ರಾಜ್ಯಮಟ್ಟದ ವಿಸ್ತೃತ ಸಭೆ ಸೇರಿಸಿ ಈ ಬಗ್ಗೆ ನಿರ್ಣಯ ಮಾಡುವುದೆಂದೂ ತೀರ್ಮಾನಿಸಲಾಯ್ತು. ಕಾಂ. ಪ್ರಮೋದ್, ಅಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಗೆ ಹನ್ನೊಂದು ಜಿಲ್ಲೆಗಳ ಪ್ರತಿನಿಧಿಗಳು ಬಂದಿದ್ದರು.

ಸಂಪಾದಕೀಯ

(1ನೇ ಪುಟದಿಂದ)

ನಮ್ಮ ಸದಸ್ಯರ ಪ್ರಯತ್ನದಿಂದ ಪಾರ್ಟಿಯು ಎಲ್ಲ ಕ್ಷೇತ್ರಗಳಲ್ಲೂ ಬೆಳೆಯುತ್ತಿರುವುದಲ್ಲದೆ ರಾಜ್ಯದ ಪ್ರಜಾಪ್ರಭುತ್ವ ಚಳುವಳಿಯಲ್ಲೂ, ನಾಗರಿಕ ಹಕ್ಕುಗಳ ರಕ್ಷಣೆಯ ಹೋರಾಟದಲ್ಲೂ, ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಟದಲ್ಲೂ ಮುಂಚೂಣಿಯಾಗಿ ಬರುತ್ತಿದೆ. ಜನತೆಯ ಪ್ರೀತ್ಯಾದರಗಳನ್ನು ಹೆಚ್ಚೆಚ್ಚು ಗಳಿಸುತ್ತಿದೆ.

ಕೇಂದ್ರ ಸಮಿತಿಯ ನೇತೃತ್ವದಲ್ಲಿ ನಮ್ಮ ರಾಜ್ಯದಲ್ಲಿ ಬಲಿಷ್ಠವಾದ ಪಾರ್ಟಿಯನ್ನು ನಾವು ಕಟ್ಟಬೇಕಾಗಿದೆ. ಪ್ರಜಾಸತ್ತಾತ್ಮಕ ಸಾಮೂಹಿಕ ಸಂಘಟನೆಗಳನ್ನು ಕಟ್ಟಬೇಕಾಗಿದೆ. ನಮ್ಮಲ್ಲಿರುವ ನ್ಯೂನತೆಗಳನ್ನು ಬಗೆಹರಿಸಿ ಮಾರ್ಕ್ಸ್‌ವಾದಿ ಲೆನಿನ್‌ವಾದಿ ತತ್ವಗಳ ಆಧಾರದಲ್ಲಿ ಬಲಿಷ್ಠವಾದ ಪಾರ್ಟಿಯನ್ನು ಕಟ್ಟಲು ಈ ಪಾರ್ಟಿ ಪ್ಲೀನಮ್ ಸಭೆಯು ಯಶಸ್ವಿಯಾಗಲೆಂದು ನಮ್ಮ ಹಾರೈಕೆ.

ಮುಖ್ಯಮಂತ್ರಿ ಬಳಿ ನಿಯೋಗ

(1ನೇ ಪುಟದಿಂದ)

ಮಂತ್ರಿಗಳಾದ ಕಾಗೋಡು ತಿಮ್ಮಪ್ಪ, ವೀರಪ್ಪಮೊಯ್ಲಿ ಮತ್ತು ಶ್ರೀಮತಿ ರೇಣುಕಾ ರಾಜೇಂದ್ರನ್ ಭಾಗವಹಿಸಿದ್ದರು.

ಇತ್ತೀಚಿನ ರೈತ ಹೋರಾಟದಲ್ಲಿ ಬಂಧಿತರನ್ನು ತಕ್ಷಣ ಬಿಡುಗಡೆ ಮಾಡಬೇಕು, 1979ರಲ್ಲಿ ಹಳಿಯಾಳದಲ್ಲಿ ನಡೆದ ವೀರೋಚಿತ ಭೂಸ್ವಾಧೀನ ಚಳುವಳಿಯಲ್ಲಿ ರೈತರ ವಿರುದ್ಧದ ಮೊಕದ್ದಮೆಗಳ ವಾಪಸಾತಿ, ಬೆಟರ್‌ಮೆಂಟ್ ಲೆವಿ ಮತ್ತು ನೀರಿನ ಕರಗಳ ರದ್ಧತಿ, ಕೋಲಾರ, ಬಿಜಾಪುರ, ಗುಲ್ಬರ್ಗಾ ಮತ್ತಿತರ ಕ್ಷಾಮಪೀಡಿತ ಜಿಲ್ಲೆಗಳನ್ನು "ಬರಗಾಲ ಪೀಡಿತ ಪ್ರದೇಶ"ಗಳೆಂದು ಘೋಷಿಸಿ, ಈ ಪ್ರದೇಶಗಳಲ್ಲಿ ತಕ್ಷಣ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸುವುದು, ಕೃಷಿ ಕೂಲಿಗಾರರಿಗೆ ರೂ. 10/- ದಿನಕೂಲಿ ಕೊಡಬೇಕು ಇತ್ಯಾದಿ ಬೇಡಿಕೆಗಳು ಮನವಿಪತ್ರದಲ್ಲಿ ಒಳಗೊಂಡಿದ್ದವು.

ರೈತನಾಯಕರ ಆಗ್ರಹದ ಬೇಡಿಕೆಗಳಿಗೆ ಸಹಾನುಭೂತಿ ಸೂಚಿಸಿದ ಶ್ರೀ ಗುಂಡೂರಾಯರು ನಿಯೋಗದ ವಿವರವಾದ ಚರ್ಚೆಗೆ ದ. 23-12-80 ರಂದು ನಿಯೋಗದ ಸದಸ್ಯರನ್ನು ಆಹ್ವಾನಿಸಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಲೋಕೋಪಯೋಗಿ ಖಾತೆಯ ಪತಿಯಿಂದ ನಡೆಯುತ್ತಿರುವ ಕಾಮಗಾರಿಗಳಲ್ಲಿ ಹಣ ದುರುಪಯೋಗವಾಗುತ್ತಿದೆ ಎಂಬ ಕೋಲಾರ ರೈತ ನಾಯಕರ ದೂರನ್ನು ಕೇಳಿಸಿಕೊಂಡ ಮುಖ್ಯಮಂತ್ರಿಯವರು, ಶ್ರೀ ಕಾಗೋಡು ತಿಮ್ಮಪ್ಪ ಮತ್ತು ಶ್ರೀಮತಿ ರೇಣುಕಾ ರಾಜೇಂದ್ರನ್ ಇವರನ್ನು ಜಿಲ್ಲೆಗೆ ತಕ್ಷಣ ಭೇಟಿ ಕೊಡಲು ಆದೇಶ ನೀಡಿದರು.

ಡಿ. 23ರಂದು ನಡೆಯಲಿರುವ ಮಾತುಕತೆಯ ನಂತರ ಮುಂದಿನಕ್ರಮ ಕೈಗೊಳ್ಳುವ ಬಗ್ಗೆ ಕರ್ನಾಟಕ ಪ್ರಾಂತ ರೈತಸಂಘ ನಿರ್ಧಾರ ಕೈಗೊಳ್ಳಲಿದೆ.

ಮಲಪ್ರಭಾ ರೈತರ ಬಿಡುಗಡೆ ಆಗಲಿ

ಮಲಪ್ರಭಾದ 87 ರೈತ ಚಳುವಳಿಗಾರರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸರ್ಕಾರಕ್ಕೆ ಮನವಿಮಾಡಿದೆ. ರೈತರನ್ನು ಬಂಧಿಸಿ ಅವರ ಮೇಲೆ ಸುಳ್ಳುದಾವೆಗಳನ್ನು ಹೂಡಿ ಸರಕಾರ ಅವರಿಗೆ ದ್ರೋಹ ಬಗೆದಿದೆ. ಡಿಸೆಂಬರ್ ಹನ್ನೆರಡರಂದು ಬೆಂಗಳೂರಿನಲ್ಲಿ ನಡೆದ ಸಾಮೂಹಿಕ ರೈತರ ರ್‍ಯಾಲಿಯು ಈ ಬಿಡುಗಡೆಗಾಗಿ ಒತ್ತಾಯಿಸುತ್ತದೆ.

ರಾಜ್ಯಸಮಿತಿಯ ಕಾರ್ಯದರ್ಶಿಯವರಾದ ಕಾಂ. ಎಂ.ಕೆ. ಭಟ್ ಅವರು ಹುಬ್ಬಳ್ಳಿಗೆ ಇತ್ತೀಚೆಗೆ ಭೆಟಿ ನೀಡಿ, ಅಲ್ಲಿನ ಮಹಿಳಾ ಪ್ರದರ್ಶನಕಾರರ ಮೇಲೆ ಪೋಲೀಸರು ನಡೆಸಿದ ಹಲ್ಲೆಯು ಸತ್ಯವೆಂದು ಕಂಡುಬಂದುದರಿಂದ ಇದು ಖಂಡನೀಯ ಎಂದು ಹೇಳಿದ್ದಾರೆ ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆದಿರುವ ಈ ಹೇಯ ಕೃತ್ಯವು ಅವಮಾನವೀಯವಾದದ್ದು, ಸರ್ಕಾರವು ಇಂಥ ದಬ್ಬಾಳಿಕೆಯನ್ನು ನಿಲ್ಲಿಸದಿದ್ದರೆ ಜನತೆಯ ಚಳುವಳಿ ತೀವ್ರವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಪ್ಲೀನಮ್ ಪ್ರತಿನಿಧಿಗಳ ಗಮನಕ್ಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯದ ಪ್ಲೀನಮ್ 1980 ಡಿಸೆಂಬರ್ 24ರಿಂದ 28ರ ತನಕ ಮೈಸೂರಿನ ಅಶೋಕ ರಸ್ತೆಯಲ್ಲಿರುವ ಕನ್ಯಕಾ ಮಹಲ್‌ನಲ್ಲಿ ನಡೆಯಲಿದೆ. ಮೈಸೂರು ಮುಖ್ಯ ಬಸ್ ನಿಲ್ದಾಣದ ಸಮೀಪವಿರುವ ಟೌನ್ ಹಾಲಿನ ಎದುರುಗಡೆ ಇರುವ ಪಕ್ಷದ ಕಛೇರಿಗೆ ಸಮೀಪದಲ್ಲಿ ಕನ್ಯಕಾ ಮಹಲ್ ಇದೆ. 24ರಂದು ಮಧ್ಯಾಹ್ನದ ಮೇಲೆ 3 ಘಂಟೆಯಿಂದ 6 ಘಂಟೆಯ ತನಕ ಪ್ರತಿನಿಧಿಗಳ ರಿಜಿಸ್ಟ್ರೇಷನ್ ನಡೆಯುವುದು, ಸಂಜೆ 6-30ಕ್ಕೆ ಟೌನ್‌ಹಾಲಿನಲ್ಲಿ ಪ್ಲೀನಮ್‌ನ ಉದ್ಘಾಟನಾ ಸಮಾರಂಭವಿದೆ. 28ರಂದು ಮಧ್ಯಾಹ್ನಕ್ಕಾಗುವಾಗ ಪ್ರತಿನಿಧಿ ಸಭೆ ಮುಗಿಯುವುದು. ಮಧ್ಯಾಹ್ನದ ಮೇಲೆ 3 ಘಂಟೆಯಿಂದ ಮೆರವಣಿಗೆ; ಸಂಜೆ 6ಕ್ಕೆ ಬಹಿರಂಗ ಸಭೆ ಇದೆ. ಪ್ರತಿನಿಧಿಗಳು ಮತ್ತು ವೀಕ್ಷಕರು 24ರಂದು ಮಧ್ಯಾಹ್ನದ ಮೇಲೆ 3 ಘಂಟೆಗೆ ಮೊದಲೇ ಪ್ಲೀನಮ್ ಜಾಗವನ್ನು ತಲುಪಬೇಕು, ಪ್ರತಿನಿಧಿ ಶುಲ್ಕ 20 ರೂಪಾಯಿ ಕೊಡಬೇಕು. ಚಳಿಗಾಲವಾಗಿರುವುದರಿಂದ ದಪ್ಪನೆಯ ಉಡುಪುಗಳನ್ನು ತರಬೇಕು. 23-12-80ರ ರಾತ್ರಿಯಿಂದ 24-12-80 ಸಂಜೆ 5 ಘಂಟೆ ತನಕ ಮೈಸೂರು ಮುಖ್ಯ ಬಸ್ ನಿಲ್ದಾಣದಲ್ಲಿ ಸ್ವಯಂಸೇವಕರನ್ನು ನಿಲ್ಲಿಸಲಾಗುವುದು.

ಪ್ಲೀನಮ್ ಸ್ವಾಗತ ಸಮಿತಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT